ಶ್ರೀ ಮ ಮಾಸ್ಟರ್

H.S. ರಾಜಶೇಖರ.
ಅಂತ್ಯಜ್ಯ ನಗರ..
ಮಾನಿ ವಿಶು ಮಾರಣ್ಣ

ಭಕ್ತಿಯಿಂದ ಮಾಡಿದ ಗಾನವು ಯೋಗವಾಗುವುದು. ...ದ ಮಾನವರು ಪರಮಾತ್ಮನನ್ನು ಸೇರುವರು.

ಕಾವ್ಯಾಲಾಪಶ್ಚಯೇ ಕೇಚಿದ್ಗೀತಾನಿ ಸಕಲಾನಿಚ |
ಶಬ್ದಮೂರ್ತಿಧರಸ್ಯೈತೇ ವಿಷ್ಣೋರಂಶಾ ಮಹಾತ್ಮನಃ ||
—(ಶ್ರೀ ವಿಷ್ಣುಪುರ.

ಶಬ್ದಸ್ವರೂಪವಾದ ಕಾವ್ಯಗಳೂ ಸಂಗೀತವೂ ಪರಮಾತ್ಮನ ಮಧ್ಯ... ...ರ್ತಿ ಸ್ವರೂಪಾಂಶವು.

ನಾಹಂ ವಸಾಮಿ ವೈಕುಂಠೇ ನಯೋಗಿ ಹೃದಯೇರವೌ |
ಮದ್ಭಕ್ತಾ ಯತ್ರ ಗಾಯಂತೆ ತತ್ರ ತಿಷ್ಠಾಮಿ ನಾರದ ||
—(ಭಗವದ್ಭಾಕಥವಾ...

ಎಲೈ ನಾರದ, ನಾನು ವೈಕುಂಠದಲ್ಲಾಗಲೀ, ಯೋಗಿಗಳ ಹೃ... ...ಲ್ಲಾಗಲೀ, ಸೂರ್ಯಮಂಡಲದಲ್ಲಾಗಲೀ ಇರುವುದಿಲ್ಲ. ನನ್ನ... ...ಲ್ಲಿ ಗಾಯನ ಮಾಡುವರೋ ಅಲ್ಲಿ ನಾನಿದ್ದೇ ಇರುವೆನು. ...ಗೀತವು ಸರ್ವೋತ್ಕೃಷ್ಟವೆನಿಸಿದೆ.

ನಾದ ಪ್ರಕರಣ

"**ಸಂಗೀತ**" ಎಂದರೆ 'ಗಾಯನ, ವಾದನ, ನರ್ತನ' ಇವ... ...ದು ಕೆಲವರೂ, 'ಸ್ವರ, ರಾಗ, ತಾಳ' ಎಂದು ಇತರರೂ ಅಭ...

ಸಂ + ಗೀತ = ಎಂದರೆ 'ಚೆನ್ನಾಗಿ ಹಾಡುವುದು' ಎಂದ...

ಗೀತಂ ವಾದ್ಯಂಚ ನೃತ್ಯಂಚ ತ್ರಯಂ ಸಂಗೀತಮು...

ಸಂಗೀತವು "ಮಾರ್ಗ", "ದೇಶಿ" ಎಂದು ಎರಡು ...ರೆ ಭರತಋಷಿಗಳಿಂದ ಪ್ರಕಟಿತವಾದ ಇತರ ...ೀಯ ಸಂಗೀತ. 'ದೇಶಿ' ಎಂದರೆ ಆಯಾ ...ಲ್ಲಿ ಜನರಂಜಿತವಾದ ಸಂಗೀತ.

...ೀತಕ್ಕೆ ಮೂಲಾಧಾರವಾದುದು **ನಾದ.** ಬ್ರಹ್ಮ, ವಿಷ್ಣು, ಮಹೇ...
...ಾದಸ್ವರೂಪರಾಗಿರುವರು.

...ಾದೋಪಾಸನೆಯಿಂದ ತ್ರಿಮೂರ್ತಿಗಳ ಕೃಪೆಯನ್ನು ಪಡೆಯಬಹುದ...

ನಾದೋತ್ಪತ್ತಿ: ದೇಹದಲ್ಲಿರುವ ಆತ್ಮವು ಮನಸ್ಸನ್ನು ಪ್ರೇರೇಪಿಸ... ಮನಸ್ಸು ದೇಹದ ಅಗ್ನಿ(ಶಾಖ)ಯನ್ನು ಹೊಡೆಯುತ್ತದೆ. ...ಯು ವಾಯುವನ್ನು ಪ್ರೇರೇಪಿಸುತ್ತದೆ. ಆ ಗಾಳಿಯು ನಾಭಿ (ಹೊಕ್ಕಳ... ...ಥಿಯಿಂದ ಮೇಲ್ಮುಖವಾಗಿ ನಾಭಿ, ಹೃದಯ, ಕಂಠ, ಶಿರಸ್ಸು ಮತ್ತು ಮು... ...ವುಗಳ ಮೂಲಕ ಕ್ರಮವಾಗಿ ಸಂಚರಿಸುವಾಗ ನಾದವು ಉತ್ಪತ್ತಿಯಾಗುತ್ತ...

ನಾದವು ನಾಭಿಯಲ್ಲಿ ಅತಿ ಸೂಕ್ಷ್ಮವೆಂಬುದಾಗಿಯೂ, ಹೃದಯದ... ...ಾಕ್ಷ್ಮವೆಂಬುದಾಗಿಯೂ, ಕಂಠದಲ್ಲಿ ಪುಷ್ಟವೆಂಬುದಾಗಿಯೂ, ಶಿರಸ್ಸಿನ... ...ಪುಷ್ಟವೆಂಬುದಾಗಿಯೂ, ಮುಖದಲ್ಲಿ ಕೃತ್ರಿಮವೆಂಬುದಾಗಿಯೂ ಹೇ... ...ವು ವ್ಯಕ್ತಪಡುತ್ತದೆ.

ನಾದಶಬ್ದಾರ್ಥ: 'ನಾದ' ಎಂಬ ಶಬ್ದದಲ್ಲಿ '**ನ**' ಎಂಬ ಅಕ್ಷರ... ಅಥವಾ ವಾಯು ಎಂಬುದಾಗಿಯೂ, '**ದ**' ಎಂಬ ಅಕ್ಷರವು ಅ... ಬೆಂಕಿ ಎಂಬುದಾಗಿಯೂ ಹೇಳಲ್ಪಟ್ಟಿದೆ. ವಾಯು–ಅಗ್ನಿ ಸಂಯೋ... ನಾದ, ಧ್ವನಿ, ಶಬ್ದ ಎನ್ನುವುದು ಉತ್ಪತ್ತಿಯಾಗುವುದು.

...**ದಪ್ರಶಂಸೆ:** ನಾದವಿಲ್ಲದೆ ಗೀತವಿಲ್ಲ. ನಾದವಿಲ್ಲದೆ ಸ್ವರವಿ... ರಾಗವಿಲ್ಲ. ಗೀತ, ಸ್ವರ, ರಾಗ ಇವು ಮೂರೂ ನಾದಾವು... ...ನಾದಾತ್ಮಕವು. ವಾದ್ಯವೂ ನಾದಾತ್ಮಕವು. ಇವುಗೂ... ...ವೆ. ಆದ್ದರಿಂದ ಗೀತ, ವಾದ್ಯ, ನಾಟ್ಯ ಇವು ...

...ಾಗ: ನಾದದಲ್ಲಿ "ಆಹತ" ನಾದ, "ಅನಾಹತ... ... **ಆಹತ ನಾದವು** ಭವಭಂಜಕವಾಗಿಯೂ, ... ಮೂರ್ಛನಾದಿಗಳ ಮುಖಾಂತ...

ರಂಜಕವಾಗಿಯೂ ಇದೆ. ಶ್ರೋತೃಗಳ ಮನಸ್ಸಿಗೆ ಆನಂದವನ್ನುಂಟುಮಾಡುವಂತಹ ಸ್ಥೂಲ ನಾದ. **ಅನಾಹತ ನಾದವು** ರಂಜನೆಯಿಲ್ಲದುದಾಗಿಯೂ, ಗುರುಮುಖದಿಂದಲೇ ಉಪದೇಶಿಸಲ್ಪಡತಕ್ಕುದಾಗಿಯೂ, ಮುಕ್ತಿಪ್ರದವಾಗಿಯೂ, ಅಚಂಚಲ ಮನಸ್ಸುಳ್ಳ ಋಷಿಗಳಿಂದ ಸಾಧಿಸಲ್ಪಡತಕ್ಕವುಗಳಾಗಿಯೂ ಇದೆ. ಜ್ಞಾನೇಂದ್ರಿಯಕ್ಕೆ ಮಾತ್ರವೇ ಗೋಚರಿಸತಕ್ಕ ಸೂಕ್ಷ್ಮನಾದ.

ನಾದವ್ಯವಹಾರ: ನಾದವು ವ್ಯವಹಾರ(ರೂಢಿ)ದಲ್ಲಿ ಮಂದ್ರ, ಮಧ್ಯ, ತಾರ ಎಂದು ಮೂರು ವಿಧವಾಗಿದೆ. ನಾದವು ಹೃದಯದಲ್ಲಿ ಮಂದ್ರವೆಂದೂ, ಕಂಠದಲ್ಲಿ ಮಧ್ಯವೆಂದೂ, ಶಿರಸ್ಸಿನಲ್ಲಿ ತಾರವೆಂದೂ ಹೇಳಲ್ಪಟ್ಟಿದೆ. ನಾದವು ಹೃದಯದಲ್ಲಿ ಒಂದು ಭಾಗವಿದ್ದರೆ ಕಂಠಕ್ಕೆ ಬಂದಾಗ ಎರಡರಷ್ಟೂ, ಶಿರಸ್ಸಿಗೆ ಬಂದಾಗ ನಾಲ್ಕರಷ್ಟೂ, ಎಂದರೆ ಕಂಠಕ್ಕೆ ಎರಡರಷ್ಟು ಆಗುತ್ತದೆ ಅಥವಾ ಸ್ಫುರಿಸುತ್ತದೆ.

ನಾದದಿಂದ ಅಕ್ಷರವೂ, ಅಕ್ಷರದಿಂದ ಪದವೂ, ಪದದಿಂದ ಮಾತೂ (ವಾಕ್ಯವೂ), ಮಾತಿನಿಂದ ವ್ಯವಹಾರವೂ ನಡೆಯುತ್ತಿರುವುದರಿಂದ ಜಗತ್ತು ನಾದಾಧೀನವು. ನಾದದಿಂದ ಶ್ರುತಿಯೂ, ಶ್ರುತಿಯಿಂದ ಷಡ್ಜಾದಿ ಸ್ವರಗಳೂ, ಸ್ವರಗಳಿಂದ ರಾಗವೂ, ರಾಗದಿಂದ ಸಂಗೀತವೂ ಆಗುವುದರಿಂದ ಗೀತವು ನಾದಸ್ವರೂಪ, ವಾದ್ಯವು ಗೀತವನ್ನೇ ಅನುಸರಿಸಿದೆ.

ಶ್ರುತಿ ಎಂಬುದು ರಚನಾತ್ಮಕ (ಅಸ್ಪಷ್ಟ) ನಾದವು. ಸ್ವರವು ಶ್ರೋತೃವಿನ ಚಿತ್ತವನ್ನು ಸ್ವತಃ ರಂಜಿಸುವ ಅನುಸರಣಾತ್ಮಕ(ಸ್ಪಷ್ಟ) ನಾದವು.

ನಾದವು 22 ಭೇದಗಳಾಗಿ ಶ್ರುತಿಗಳಾಗಿವೆ. ಆ ಶ್ರುತಿಗಳು ಹೃದಯದಿಂದ ಮೇಲ್ಮುಖವಾಗಿ ಇಪ್ಪತ್ತೆರಡು, ಇಪ್ಪತ್ತೆರಡು ಭಾಗಗಳಾಗಿ ಸ್ಥಾನಭೇದಗಳಿಂದ ಉಚ್ಚಾರವಾಗುತ್ತವೆ.

ಸ್ವರ ಪ್ರಕರಣ

ಶ್ರುತಿಯ ಜೊತೆಯಲ್ಲೇ ಇರುವ, ಉಚ್ಚಾರಕ್ಕೆ ಯೋಗ್ಯವಾದ, ಸ್ವತಃ ಜನೆಯುಳ್ಳ, ಶ್ರೋತೃಗಳ ಕಿವಿಗೆ ಇಂಪನ್ನು ಉಂಟುಮಾಡುವುದಾಗಿರು ದೇ ಸ್ವರ.

ಸ್ವರಗಳ ಹೆಸರು: ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದ ಎಂಬ ಈ ಏಳು ಸ್ವರಗಳಿಗೂ ಕ್ರಮವಾಗಿ ಸ, ರಿ, ಗ, ಮ, ಪ, ಧ, ನಿ ಎಂಬ ಸಂಕೇತಾಕ್ಷರಗಳು ಏರ್ಪಟ್ಟಿವೆ.

ಇವುಗಳಲ್ಲಿ ಷಡ್ಜ(ಸ)ವೂ, ಪಂಚಮ(ಪ)ವೂ ಯಾವಾಗಲೂ ವ್ಯತ್ಯಾಸ ಹೊಂದುವುದಿಲ್ಲ. ಉಳಿದ ಸ್ವರಗಳು ಮುಂದೆ ಕಂಡಂತೆ ವ್ಯತ್ಯಾಸವನ್ನು ಹೊಂದುತ್ತವೆ—

ಸ್ವರ	ಪ್ರಭೇದ	ಸಂಕೇತಾಕ್ಷರ
ಷಡ್ಜ—	ಇಲ್ಲ	ಸ
ಋಷಭ—	ಶುದ್ಧ ಋಷಭ	$ರಿ_1$
	ಚತುಶ್ರ್ಶುತಿ ಋಷಭ	$ರಿ_2$
	ಷಟ್ಶ್ರುತಿ ಋಷಭ	$ರಿ_3$
ಗಾಂಧಾರ—	ಶುದ್ಧ ಗಾಂಧಾರ	$ಗ_1$
	ಸಾಧಾರಣ ಗಾಂಧಾರ	$ಗ_2$
	ಅಂತರ ಗಾಂಧಾರ	$ಗ_3$
ಮಧ್ಯಮ—	ಶುದ್ಧ ಮಧ್ಯಮ	$ಮ_1$
	ಪ್ರತಿ ಮಧ್ಯಮ	$ಮ_2$
ಪಂಚಮ—	ಇಲ್ಲ	ಪ
ಧೈವತ—	ಶುದ್ಧ ಧೈವತ	$ಧ_1$
	ಚತುಶ್ಶ್ರುತಿ ಧೈವತ	$ಧ_2$
	ಷಟ್ಶ್ರುತಿ ಧೈವತ	$ಧ_3$
ನಿಷಾದ—	ಶುದ್ಧ ನಿಷಾದ	$ನಿ_1$
	ಕೈಶಿಕಿ ನಿಷಾದ	$ನಿ_2$
	ಕಾಕಲಿ ನಿಷಾಧ	$ನಿ_3$

ಮೇಲಿನ ಹದಿನಾರು ಸ್ವರಗಳು ಕೂಡ ಈ ಕೆಳಗೆ ತೋರಿಸಿರುವ 12 ಸ್ವರಗಳಲ್ಲಿ ಅಡಕವಾಗಿರುವುದರಿಂದ ಸಂಗೀತದಲ್ಲಿ ಉಪಯೋಗಿಸಲ್ಪಡುವ ಸ್ವರಗಳು ಹನ್ನೆರಡೇ ಆಗಿರುವುವು.

(1)	ಷಡ್ಜ—		ಸ
(2)	ಶುದ್ಧ ಋಷಭ—		ರಿ$_{1}$
(3)	ಚತುಶ್ರುತಿ ಋಷಭ ಅಥವಾ ಶುದ್ಧ ಗಾಂಧಾರ	ಇವೆರಡಕ್ಕೂ ಒಂದೇ ಸ್ವರ	ರಿ$_{2}$ = ಗ$_{1}$
(4)	ಷಟ್ಶ್ರುತಿ ಋಷಭ ಅಥವಾ ಸಾಧಾರಣ ಗಾಂಧಾರ	ಇವೆರಡಕ್ಕೂ ಒಂದೇ ಸ್ವರ	ರಿ$_{3}$ = ಗ$_{2}$
(5)	ಅಂತರ ಗಾಂಧಾರ—		ಗ$_{3}$
(6)	ಶುದ್ಧ ಮಧ್ಯಮ—		ಮ$_{1}$
(7)	ಪ್ರತಿ ಮಧ್ಯಮ—		ಮ$_{2}$
(8)	ಪಂಚಮ—		ಪ
(9)	ಶುದ್ಧ ಧೈವತ		ಧ$_{1}$
(10)	ಚತುಶ್ರುತಿ ಧೈವತ ಅಥವಾ ಶುದ್ಧ ನಿಷಾದ	ಇವೆರಡಕ್ಕೂ ಒಂದೇ ಸ್ವರ	ಧ$_{2}$ = ನಿ$_{1}$
(11)	ಷಟ್ಶ್ರುತಿ ಧೈವತ ಅಥವಾ ಕೈಶಿಕಿ ನಿಷಾದ	ಇವೆರಡಕ್ಕೂ ಒಂದೇ ಸ್ವರ	ಧ$_{3}$ = ನಿ$_{2}$
(12)	ಕಾಕಲಿ ನಿಷಾದ—		ನಿ$_{3}$

ಸ್ವರ ನಾಮಕಾರಣ

(1) **ಷಡ್ಜ ಸ್ವರ**: ಋಷಭದಿಂದ ನಿಷಾದಾಂತ್ಯದವರೆಗೂ ಇರುವ ಆರು ಸ್ವರಗಳಿಗೆ ಜನಕಸ್ಥಾನವಾಗಿಯೂ, ಎಂದರೆ ಆರು ಸ್ವರಗಳನ್ನು ಹುಟ್ಟಿಸತಕ್ಕು ದಾಗಿಯೂ, ಮನುಷ್ಯನ ಶರೀರದಲ್ಲಿರುವ ಹೃದಯ, ಕಂಠ, ಮೂರ್ಧನ್ಯ (ಅಂಗುಳು), ನಾಲಿಗೆ, ಹಲ್ಲು, ಮೂಗು ಈ ಆರರ ಮೂಲಕ ಹುಟ್ಟುವವು ಗಳಾಗಿಯೂ ಇರುವದರಿಂದ "ಷಡ್ಜ"ವೆಂದು ಹೆಸರು.

(2) **ಋಷಭ ಸ್ವರ**: ಹೃದಯಕ್ಕೆ ಶೀಘ್ರವಾಗಿ ಪ್ರವೇಶಿಸುವ ಕಾರಣ ಋಷಭವೆನ್ನಿಸಿಕೊಂಡಿದೆ. ಗೋವುಗಳ ಸಮೂಹದಲ್ಲಿ ಋಷಭ(ಗೂಳಿ)ವು ಹೇಗೆ ಬಲವಾಗಿರುವುದೋ ಹಾಗೆಯೇ ಸ್ವರಸಮೂಹಗಳಲ್ಲಿ ಎರಡನೆಯ ಸ್ಥಾನ ವನ್ನು ಹೊಂದಿದ್ದು ಬಹು ಗಂಭೀರತೆಯನ್ನು ಪಡೆದಿದೆ.

(3) **ಗಾಂಧಾರ ಸ್ವರ**: ಗಂಧರ್ವರ ಸುಖಕ್ಕೆ ಕಾರಣವಾಗಿರುವುದು ಗಾಂಧಾರ.

(4) **ಮಧ್ಯಮ ಸ್ವರ**: ಸಪ್ತಸ್ವರಗಳಿಗೆ ಮಧ್ಯಮ ಸ್ಥಾನವಾದ ನಾಲ್ಕನೆಯ ಸ್ಥಾನದಲ್ಲಿ ಹುಟ್ಟುವುದರಿಂದ ಮಧ್ಯಮ ಎನ್ನಿಸಿಕೊಂಡಿದೆ.

(5) **ಪಂಚಮ ಸ್ವರ**: ಸಪ್ತಸ್ವರಗಳಲ್ಲಿ ಐದನೇ ಸ್ಥಾನವನ್ನು ಹೊಂದಿರುವ ಕಾರಣ ಪಂಚಮ ಎನಿಸಿಕೊಂಡಿದೆ.

(6) **ಧೈವತ ಸ್ವರ**: ಧೀರ ಸಂಬಂಧವಾಗಿಯೂ ಆರನೆಯ ಸ್ಥಾನದಲ್ಲಿ ಬರತಕ್ಕುದಾಗಿಯೂ ಇರುವದರಿಂದ ಧೈವತವೆನಿಸಿಕೊಂಡಿದೆ.


(7) **ನಿಷಾದ ಸ್ವರ**: ಸಪ್ತಸ್ವರಗಳಲ್ಲಿ ಮುಗಿಸುವ ಸ್ಥಾನದಲ್ಲಿರುವ ಕಾರಣ ನಿಷಾದವೆನಿಸಿಕೊಂಡಿದೆ.

ಸ್ವರೋಚ್ಚಾರಣೆ: ನವಿಲು, ಋಷಭ, ಮೇಕೆ, ಕ್ರೌಂಚ, ಕೋಗಿಲೆ, ಕುದುರೆ, ಆನೆ ಇವುಗಳ ಧ್ವನಿಗಳು ಕ್ರಮವಾಗಿ ಷಡ್ಜಾದಿ ಸಪ್ತ ಸ್ವರೋ ಚ್ಚಾರಣೆಗಳು.

ಏಳು ಸ್ವರಗಳು 12 ಭೇದಗಳಾಗಿ 16 ಹೆಸರುಗಳನ್ನು ಪಡೆದು 22 ಶ್ರುತಿಗಳಲ್ಲಿ ಅಡಕವಾಗಿವೆ.

ಸ್ವರಗಳಿಗೆ ಶ್ರುತಿಗಳು: ಮೊದಲಿನಿಂದ ನಾಲ್ಕನೆ ಶ್ರುತಿ ಪೂರ್ತ ಷಡ್ಜಸ್ಥಾನಗಳು. 5 ರಿಂದ ಏಳನೇ ಶ್ರುತಿ ಪೂರ್ತ ಋಷಭಸ್ಥಾನಗಳು. 8 ಮತ್ತು 9ನೇ ಶ್ರುತಿ ಗಾಂಧಾರಸ್ಥಾನಗಳು. 10 ರಿಂದ 13 ಶ್ರುತಿಸ್ಥಾನಗಳು ಪೂರ್ತ ಮಧ್ಯಮ ಸ್ಥಾನಗಳು, 14 ರಿಂದ 17 ಪೂರ್ತ ಪಂಚಮಸ್ಥಾನಗಳು. 18 ರಿಂದ 20ನೇ ಶ್ರುತಿ ಪೂರ್ತ ಧೈವತ ಸ್ಥಾನಗಳು. 21 ಮತ್ತು 22 ಶ್ರುತಿಗಳು ನಿಷಾದ ಸ್ಥಾನಗಳು.

* ಚತುಶ್ಚತುಶ್ಚತುಶ್ಚೈವ ಷಡ್ಜ ಮಧ್ಯಮ ಪಂಚಮಾ:
ದ್ವೇದ್ವೇ ನಿಷಾದ ಗಾಂಧಾರೌ ತ್ರಿಸ್ತ್ರೀ ಋಷಭ ಧೈವತೌ.



ನಿಷ್ಕೃಷ್ಟ ಶ್ರುತಿಗಳು:

ಷಡ್ಜಕ್ಕೆ	....	4ನೇ ಶ್ರುತಿ
ಋಷಭಕ್ಕೆ	....	7ನೇ ಶ್ರುತಿ
ಗಾಂಧಾರಕ್ಕೆ	....	9ನೇ ಶ್ರುತಿ
ಮಧ್ಯಮಕ್ಕೆ	....	13ನೇ ಶ್ರುತಿ
ಪಂಚಮಕ್ಕೆ	....	17ನೇ ಶ್ರುತಿ
ಧೈವತಕ್ಕೆ	....	20ನೇ ಶ್ರುತಿ
ನಿಷಾದಕ್ಕೆ	....	22ನೇ ಶ್ರುತಿ

ಸ್ವರ ವಿಭಾಗಗಳು: ಪ್ರಕೃತಿ-ವಿಕೃತಿ ಸ್ವರಗಳು ಎಂದು ಎರಡು ವಿಧಗಳು. ನಿಯತ ಶ್ರುತಿಗಳಲ್ಲಿ ಸೇರಿರುವ ಸ್ವರಗಳೇ ಶುದ್ಧ ಅಥವಾ 'ಪ್ರಕೃತಿ' ಸ್ವರಗಳು. ನಿಯತಶ್ರುತಿಗೆ ಹೆಚ್ಚಾಗಿಯಾಗಲೀ ಕಡಿಮೆಯಾಗಿಯಾಗಲೀ ಆಗುವ ಸ್ವರಗಳು 'ವಿಕೃತಿ' ಸ್ವರಗಳು. ಅಂದರೆ ವ್ಯತ್ಯಾಸವನ್ನು ಹೊಂದದೇ ಇರುವ ಸ್ವರಗಳಿಗೆ ಪ್ರಕೃತಿ ಸ್ವರಗಳೆಂದೂ, ವ್ಯತ್ಯಾಸವನ್ನು ಹೊಂದಿರುವ ಸ್ವರಗಳಿಗೆ ವಿಕೃತಿ ಸ್ವರಗಳೆಂದೂ ಹೆಸರು.

ಪ್ರಕೃತಿ ಸ್ವರಗಳು: ಸ $ರಿ_1$ $ಗ_1$ $ಮ_1$ ಪ $ಧ_1$ $ನಿ_1$ ಇವು ಏಳೂ ಪ್ರಕೃತಿ ಸ್ವರಗಳು. ಆದರೆ ಕೆಲವರು ಸ ಪ ಇವೆರಡೇ ಪ್ರಕೃತಿ ಸ್ವರಗಳೆಂದು ಹೇಳುತ್ತಾರೆ.

ವಿಕೃತಿ ಸ್ವರಗಳು: ಚ್ಯುತಷಡ್ಜ, ಅಚ್ಯುತಷಡ್ಜ, ಸಾಧಾರಣ ಋಷಭ, ಸಾಧಾರಣ ಗಾಂಧಾರ, ಅಂತರ ಗಾಂಧಾರ, ಚ್ಯುತಮಧ್ಯಮ, ಅಚ್ಯುತ ಮಧ್ಯಮ, ತ್ರಿಶ್ರುತಿ ಪಂಚಮ, ಕೈಶಿಕಿ ಪಂಚಮ, ಚತುಶ್ರುತಿ ಧೈವತ, ಕೈಶಿಕಿ ನಿಷಾದ, ಕಾಕಲಿ ನಿಷಾದ ಈ ಹನ್ನೆರಡೂ ವಿಕೃತಿ ಸ್ವರಗಳು.

ಸ್ಥಾಯಿಗಳು: ಹನ್ನೆರಡು ಸ್ವರಗಳು ಸೇರಿ ಒಂದು **ಸ್ಥಾಯಿ** ಅಥವ **ಸಪ್ತಕ** ಎನಿಸಿಕೊಳ್ಳುವುದು.

ಸ್ಥಾಯಿಗಳು ಮೂರು: **ಮಂದ್ರ** ಅಥವಾ ತಗ್ಗುಸ್ಥಾಯಿ, **ಮಧ್ಯ** ಸ್ಥಾಯಿ, **ತಾರ** ಅಥವಾ ಹೆಚ್ಚುಸ್ಥಾಯಿ. ಈ ಗ್ರಂಥದಲ್ಲಿ ಸ್ವರದ ಕೆಳಗೆ ಚುಕ್ಕೆ ಇದ್ದರೆ ಅದು ಮಂದ್ರಸ್ಥಾಯಿಯದೆಂದೂ, ಚುಕ್ಕೆ ಇಲ್ಲದಿರುವುದು ಮಧ್ಯ ಸ್ಥಾಯಿಯದೆಂದೂ, ಸ್ವರದ ಮೇಲ್ಗಡೆ ಚುಕ್ಕೆ ಇದ್ದರೆ ಅದು ತಾರಸ್ಥಾಯಿಯ ದೆಂದೂ ತಿಳಿದುಕೊಳ್ಳಬೇಕು.

ಮಂದ್ರ	**ಮಧ್ಯ**	**ತಾರ**
ಸ̣ ರಿ̣ ಗ̣ ಮ̣	ಸ ರಿ ಗ ಮ	ಸ̇ ರಿ̇ ಗ̇ ಮ̇

ವಾದಿಯೇ ಮೊದಲಾದ ಸ್ವರಗಳು

ಸ್ವರಗಳು ವಾದಿ, ಸಂವಾದಿ, ವಿವಾದಿ, ಅನುವಾದಿಗಳೆಂದು ನಾಲ್ಕು ಬಗೆಯಾಗಿರುವುವು.

ವಾದಿ: ಒಂದು ರಾಗದ ಅಂಶಸ್ವರ (ನ್ಯಾಸ, ಜೀವ) ವು ಪದೇಪದೇ ಉಪಯೋಗವಾಗುವುದರಿಂದ ವಾದಿಸ್ವರವೆನ್ನಿಸಿಕೊಳ್ಳುತ್ತದೆ. ವಾದಿಯನ್ನು ರಾಜನಿಗೆ ಹೋಲಿಸಿದೆ (ಸ್ವತಂತ್ರಸ್ವರ).

ಸಂವಾದಿ: ಯಾವ ಎರಡು ಸ್ವರಗಳ ನಡುವೆ 8 ಅಥವಾ 12 ಶ್ರುತಿ ಗಳ ಅಂತರವಿದೆಯೋ ಆ ಎರಡು ಸ್ವರಗಳೂ ಪರಸ್ಪರ ಸಂವಾದಿಗಳು. ಸಂವಾದಿಯು ವಾದಿಸ್ವರಕ್ಕೆ ಮಂತ್ರಿ (ಮಿತ್ರ, ಆಪ್ತ) ಯಂತಿರುವನು.

ಉದಾಹರಣೆ—ಶುದ್ಧ ಸ್ವರಗಳಲ್ಲಿ :

(ಸ – ಮ) (ಸ – ಪ) (ರಿ – ಧ) (ಗ – ನಿ)

(ಮ – ಸ) (ಪ – ಸ) (ಧ – ರಿ) (ನಿ – ಗ)

——ಇವು ಪರಸ್ಪರ ಸಂವಾದಿಗಳಾಗುವುವು.

ಪ್ರತಿಷೇಧ : ಶುದ್ಧ ಮಧ್ಯಮ, ಶುದ್ಧ ನಿಷಾದಗಳ ನಡುವೆ 8 ಶ್ರುತಿಗಳ ಅಂತರವಿದ್ದಾಗ್ಯೂ ಪರಸ್ಪರ ಸಂವಾದಿಗಳಾಗುವುದಿಲ್ಲ.

ವಿಕೃತಿ ಸ್ವರಗಳಲ್ಲಿ : (ಸಾಧಾರಣ ಗಾಂಧಾರ, ಕೈಶಿಕಿ ನಿಷಾದ), (ಅಂತರ ಗಾಂಧಾರ, ಕಾಕಲಿ ನಿಷಾದ), (ಶುದ್ಧ ಋಷಭ, ಪ್ರತಿಮಧ್ಯಮ) ಪರಸ್ಪರ ಸಂವಾದಿಗಳಾಗುತ್ತವೆ.

ವಿವಾದಿ : ಒಂದು ಸ್ವರಕ್ಕೂ ಮತ್ತೊಂದು ಸ್ವರಕ್ಕೂ ಮಧ್ಯೆ ಒಂದೇ ಶ್ರುತಿಯು ಅಂತರವಿದ್ದರೆ ಆ ಎರಡು ಸ್ವರಗಳೂ ಪರಸ್ಪರ ವಿವಾದಿಯಾಗುವುವು. ಆ ವಿವಾದಿ ಸ್ವರವು ಶತ್ರುವಿಗೆ ಸಮಾನ.

ಉದಾಹರಣೆ—ಶುದ್ಧ ಸ್ವರಗಳಲ್ಲಿ :

ರಿ$_1$–ಗ$_1$;   ಧ$_1$–ನಿ$_1$;   ಮ$_1$–ಮ$_2$.

ವಿಕೃತಿ ಸ್ವರಗಳಲ್ಲಿ : ಸಾಧಾರಣ ಗಾಂಧಾರ ಅಥವಾ ಷಟ್ಶ್ರುತಿ ಋಷಭ ಮತ್ತು ಅಂತರ ಗಾಂಧಾರ, ಕೈಶಿಕಿ ನಿಷಾದ ಅಥವಾ ಷಟ್ಶ್ರುತಿ ಧೈವತ ಮತ್ತು ಕಾಕಲಿ ನಿಷಾದ ಇವುಗಳು ಪರಸ್ಪರ ವಿವಾದಿಗಳು. ವಿವಾದಿ ದೋಷಗಳಿಂದ ಕೂಡಿದ ಸ್ವರಗಳು ಕಿವಿಗೆ ಹಿತಕರವಾಗಿರುವುದಿಲ್ಲ. (ಪೂರ್ವಿಕರು ವಿವಾದಿ ದೋಷ ಬಾರದಂತೆ ರಾಗಸಂಚಾರವನ್ನು ಏರ್ಪಡಿಸಿಕೊಂಡಿದ್ದರು. ಈಗ ಆ ನಿಯಮವು ಆಚರಣೆಯಲ್ಲಿಲ್ಲ.)

ಅನುವಾದಿ : ವಾದಿ, ಸಂವಾದಿ, ವಿವಾದಿಗಳಲ್ಲದ ಸ್ವರಗಳು ಅನುವಾದಿ ಸ್ವರಗಳಾಗುವುವು. ಈ ಅನುವಾದಿ ಸ್ವರಗಳು ಸೇವಕನಂತೆ ಹೋಲಿಸಲ್ಪಟ್ಟಿವೆ

ಗ್ರಾಮುಗಳು

ಸ್ವರಸಮೂಹಕ್ಕೆ ಗ್ರಾಮುವೆಂದು ಹೆಸರು. ಅವು ಮೂರ್ಛನಾದಿಗಳಲ್ಲಿ ಆಶ್ರಯಿಸಿರುವುವು. ಗ್ರಾಮುಗಳಲ್ಲಿ ಮೂರು ಬಗೆ. ಮೊದಲನೆಯದು 'ಷಡ್ಜ' ಗ್ರಾಮು, ಎರಡನೆಯದು 'ಮಧ್ಯಮು'ಗ್ರಾಮು. ಇವೆರಡೂ ಭೂಲೋಕದಲ್ಲಿವೆಯೆಂದೂ, ಮೂರನೆಯದಾದ ಗಾಂಧಾರ ಗ್ರಾಮುವು ಸ್ವರ್ಗಲೋಕದಲ್ಲಿದೆಯೆಂದೂ ಹೇಳಿದೆ.

ಶುದ್ಧಸ್ವರ ಗ್ರಾಮು ಷಡ್ಜಗ್ರಾಮು.
ವಿಕೃತಿಸ್ವರ ಗ್ರಾಮು ಮಧ್ಯಮುಗ್ರಾಮು.

ಗ್ರಾಮುದ ರಹಸ್ಯಗಳು ಅನೇಕ.

ಮೂರ್ಛನೆಗಳು

ಸ್ವರಗಳ ಆರೋಹಣ, ಅವರೋಹಣಗಳು 'ಮೂರ್ಛನೆ'ಗಳೆನಿಸುವುವು. ಅಂಥ ಮೂರ್ಛನೆಗಳು ಗ್ರಾಮು ಒಂದಕ್ಕೆ ಏಳೇಳು ಬರುತ್ತವೆ.

ಷಡ್ಜಗ್ರಾಮುಕ್ಕೆ—

ಸ ರಿ ಗ ಮು ಪ ಧ ನಿ
ರಿ ಗ ಮು ಪ ಧ ನಿ ಸ
ಗ ಮು ಪ ಧ ನಿ ಸ ರಿ
ಮು ಪ ಧ ನಿ ಸ ರಿ ಗ
ಪ ಧ ನಿ ಸ ರಿ ಗ ಮು
ಧ ನಿ ಸ ರಿ ಗ ಮು ಪ
ನಿ ಸ ರಿ ಗ ಮು ಪ ಧ

ಮಧ್ಯಮುಗ್ರಾಮುಕ್ಕೆ—

ಮು ಪ ಧ ನಿ ಸ ರಿ ಗ
ಪ ಧ ನಿ ಸ ರಿ ಗ ಮು
ಧ ನಿ ಸ ರಿ ಗ ಮು ಪ
ನಿ ಸ ರಿ ಗ ಮು ಪ ಧ
ಸ ರಿ ಗ ಮು ಪ ಧ ನಿ
ರಿ ಗ ಮು ಪ ಧ ನಿ ಸ
ಗ ಮು ಪ ಧ ನಿ ಸ ರಿ

ಸ್ವರಪ್ರಸ್ತಾರ :-

ಸ್ವರಸಮೂಹಗಳಲ್ಲಿ ಸ್ವರಗಳನ್ನು ಹೆಚ್ಚು ಕಡಿಮೆಯಿಲ್ಲದೆ ಲೆಖ್ಖಕ್ಕೆ ಸರಿಯಾಗಿ ವಿವರಿಸುವುದಕ್ಕೆ ಸ್ವರಪ್ರಸ್ತಾರವೆಂದು ಹೆಸರು.

ಆ ಪ್ರಸ್ತಾರಗಳು ಏಳು ಭೇದಗಳು.

ಸಂಖ್ಯೆ	ಹೆಸರು	ಪ್ರಸ್ತಾರಸ್ವರ	ಪ್ರಸ್ತಾರಮೊತ್ತ	ಪ್ರಸ್ತಾರವಿಧ
1	ಆರ್ಚಿಕ	ಸ	1	1 × 1 = 1
2	ಗಾಥಿಕ	ಸರಿ	2	1 × 2 = 2
3	ಗಾಮಿಕ	ಸರಿಗ	6	1 × 2 × 3 = 6
4	ಸ್ವರಾಂತ	ಸರಿಗಮ	24	1 × 2 × 3 × 4 = 24
5	ಔಡವ	ಸರಿಗಮಪ	120	1 × 2 × 3 × 4 × 5 = 120
6	ಷಾಡವ	ಸರಿಗಮಪಧ	720	1 × 2 × 3 × 4 × 5 × 6 = 720
7	ಸಂಪೂರ್ಣ	ಸರಿಗಮಪಧನಿ	5040	1 × 2 × 3 × 4 × 5 × 6 × 7 = 5040

ತಾನಗಳು

ತಾನಗಳು ಎರಡು ಬಗೆಗಳು. ಶುದ್ಧ ತಾನ, ಕೂಟ ತಾನ ಎಂಬುದು ಆ ಎರಡು ಬಗೆ.

ಒಂದು ರಾಗ ಮಾತ್ರ ಪ್ರಕಾಶಿಸುವಂತೆ ಮಾಡುವುದು ಶುದ್ಧ ತಾನವು.

ಉದಾಹರಣೆ—ಮಾಯಾಮಾಳವಗೌಳ, ಶಂಕರಾಭರಣ, ಹರಿಕಾಂಭೋಜಿ, ಇತ್ಯಾದಿ.

ಎರಡು ಅಥವಾ ಹೆಚ್ಚು ರಾಗಚ್ಛಾಯೆಗಳು ಬರುವಂಥವುಗಳು ಕೂಟ ತಾನವು.

ಉದಾಹರಣೆ—ಕಾಂಭೋಜಿ, ಭೈರವಿ, ಜಂಝೂಟಿ, ದ್ವಿಜಾವಂತಿ, ಇತ್ಯಾದಿ.

ವರ್ಣ

ವರ್ಣವೆಂಬುದು ಗಾನಕ್ರಿಯೆ. ಅದರಲ್ಲಿ ನಾಲ್ಕು ವಿಧಗಳು. ಅವುಗಳು ಕ್ರಮವಾಗಿ ಸ್ಥಾಯಿ, ಆರೋಹಿ, ಅವರೋಹಿ, ಸಂಚಾರಿ ಎಂಬುವು.

ಸ್ಥಾಯಿ—ಪ್ರಾರಂಭಿಸಿದ ಸ್ವರಗಳಲ್ಲೇ ಬಂದು ನಿಲ್ಲುವುದು ಕ್ರಿಯಾ ಸ್ಥಾಯಿ ವರ್ಣವು.

ಉದಾಹರಣೆ—ಸಸಸ, ರಿರಿರಿ, ಮಮಮ.

ಆರೋಹಿ—ಪ್ರಾರಂಭಿಸಿದ ಸ್ವರದಿಂದ ಮೇಲೇರುವುದು ಆರೋಹಿ.

ಉದಾಹರಣೆ—ಸರಿಗಮಪ, ರಿಗಮಪಧನಿ.

ಅವರೋಹಿ—ಹಾಗೆಯೇ ಕೆಳಗಿಳಿಯುವ ಕ್ರಿಯೆ ಅವರೋಹಿ.

ಉದಾಹರಣೆ—ಸನಿಧಪಮ, ನಿಧಪಮಗರಿ, ಇತ್ಯಾದಿ.

ಸಂಚಾರಿ—ಮೇಲೆ ಹೇಳಿರುವ ಮೂರು ಕ್ರಿಯೆಗಳ ಮಿಶ್ರವೇ ಸಂಚಾರಿ.

ಗಮಕಗಳು

ಸ್ವರಗಳ ಕಂಪನವೇ ಗಮಕವೆನಿಸುವುದು. ಆ ಗಮಕವು ಶ್ರೋತೃಗಳ ಚಿತ್ತಗಳಿಗೆ ಸುಖಪ್ರದವಾಗಿರಬೇಕು. ಅವುಗಳು 15 ವಿಧವಾಗಿರುವುವು.

(1) **ತಿರಿಪ**—ಸ್ವರಗಳನ್ನು ಅದುಮಿ (ಒತ್ತಿ) ಹಾಡುವುದು.

ಉದಾಹರಣೆ—ನ್ನಿಸರಿಗ, ಸರ್ರಿಗಮ್ಮಪ, ಗ್ಗಮಪಮ್ಮರ್ರಿ.

(2) **ಕಂಪಿತ**—ಒಂದು ಸ್ವರದಲ್ಲಿ ನಿಂತು ಅದನ್ನು ಅಲುಗಿಸುವುದು.

ಉದಾಹರಣೆ—ಗಾ ಗ ಗ ಗ ಗ ಗ ಗ.

(3) **ಸ್ಫುರಿತ**—ಜಂಟೀಸ್ವರವನ್ನು ಉಚ್ಚರಿಸುವಾಗ ಅವೆರಡರ ಮಧ್ಯೆ ಕೆಳಗಿನ ಸ್ವರವಾಗಲೀ ಮೇಲಿನ ಸ್ವರವಾಗಲೀ ಬರುವಂತೆ ಹಾಡುವುದು.

ಉದಾಹರಣೆ—ಸಸ ಎನ್ನುವುದು ಸರಿಸ, ಸ ನಿ ಸ ದಂತೆ
ಮಮ ಎನ್ನುವುದು ಮಗಮ, ಮಪಮ ದಂತೆ.

(4) **ಲೀನ**—ಒಂದು ಸ್ವರದಲ್ಲಿ ನಿಂತು ಮುಂದಿನ ಸ್ವರದಲ್ಲಾಗಲೀ ಹಿಂದಿನ ಸ್ವರದಲ್ಲಾಗಲೀ ಸೇರುವುದು.

ಉದಾಹರಣೆ—ಗಾ꞉꞉꞉ಮ, ಗಾ꞉꞉꞉ರಿ, ನೀ꞉꞉꞉꞉ಸ, ನೀ꞉꞉꞉꞉ಧ.

(5) **ಆಂದೋಳಿಕ**—ಒಂದು ಸ್ವರದಲ್ಲಿ 4 ಅಥವಾ 5 ಅಥವಾ ಹೆಚ್ಚು ಸ್ವರಗಳಷ್ಟು ಕಾಲ ನಿಲ್ಲಿಸಿ ಕಡೇ ಸ್ವರವನ್ನು ಸೂಕ್ಷ್ಮವಾಗಿ ನಡುಗಿಸುವುದು.

ಉದಾಹರಣೆ—ಗಮಪಧನೀ((((((.

ಸರಿಸಗಾಗ, ಸರಿಸಮಾಮ, ಸರಿಸಪಾಪ.

(6) **ವಲೀ**—ಒಂದು ಸ್ವರದಲ್ಲಿ ನಿಂತು ಮೇಲಿನ ಸ್ವರವನ್ನುಚ್ಚರಿಸುವುದು.

ಉದಾಹರಣೆ—ಗಾ(((ಮ ಇದು ವೀಣೆಗಾಗಿ ಹೇಳಿದೆ. ವೀಣೆಯಲ್ಲಿ ಒಂದು ಸ್ವರವನ್ನು ಹಿಡಿದು ಸ್ವಲ್ಪ ಎಳೆದರೆ ಮೇಲಿನ ಸ್ವರವಾಗುವುದು.

(7) **ತ್ರಿಭಿನ್ನ**—ಏಕಕಾಲದಲ್ಲಿ ವೀಣೆಯ 3 ತಂತಿಗಳಲ್ಲಿ ಬೆರಳನ್ನು ಇಟ್ಟು ನುಡಿಸುವುದು.

(8) **ಕುರುಳ**—ಒಂದು ಸ್ಥಾನದಿಂದ ಮೇಲಿನ ಸ್ವರವನ್ನು ಹಾಡಿದಂತೆ ತೋರಿಸುವುದು.

ಉದಾಹರಣೆ—ನೀಧಾಪಾಮಾ ಎನ್ನುವುದನ್ನು

ನೀಸಧಾನಿ ಪಾಧಮಾ ಎನ್ನುವಂತೆ ಹಾಡುವುದು.

(9) **ಆಹತ**—ಇದನ್ನು ರವೆ ಜಾತಿ, ಸಣ್ಣ ಜಾತಿ ಎನ್ನುವರು. ಒಂದು ಸ್ವರದಿಂದ ಕೆಳಗಿಳಿಯುವಾಗ ಮೊದಲಿನ ಸ್ವರವನ್ನೇ ಉಚ್ಚರಿಸಿ ಕೆಳಗಿಳಿಯುವುದು.

ಉದಾಹರಣೆ—ರಿಸ ಎನ್ನುವುದು ರಿರಿಸ ಆಗುವಂತೆ.

ಪಮ-ಪಪಮ ,,

(10) **ಉಲ್ಲಸಿತ**—ಇದನ್ನು ಜಾರು ಎನ್ನುವರು. ಇದರಲ್ಲಿ ಮೇಲುಜಾರು, ಕೀಳುಜಾರು ಎಂದು ಎರಡು ಬಗೆ. ಒಂದು ಸ್ವರದಿಂದ ನಾಲ್ಕಾರು ಸ್ವರಗಳು ಕೆಳಗಡೆ ಜಾರಿದರೆ ಕೀಳುಜಾರು. ಮೊದಲ ಮತ್ತು ಕಡೇ ಸ್ವರಗಳ ನಡುವೆ ಇರುವ ಸ್ವರಗಳು ಅತಿ ಸೂಕ್ಷ್ಮವಾಗಿ ಗೋಚರಿಸುವುವು.

ಉದಾಹರಣೆ—ಪಸಾ ಇದು ಪಧನಿಸಾ. ಇಲ್ಲಿ ಧ ನಿ ಎರಡೂ ಅತಿ ಸೂಕ್ಷ್ಮ.

ರಿನೀ ಇದು ರಿಗಮಪಧನೀ. ಇದರಲ್ಲಿನ ಗಮಪಧ ಈ ನಾಲ್ಕೂ ಅತಿ ಸೂಕ್ಷ್ಮ.

(11) **ಪ್ಲಾವಿತ**—ಒಂದೇ ಸ್ವರದಲ್ಲಿ ಅನೇಕ ಮಾತ್ರೆಗಳ ಕಾಲ ನಿಂತು ಮೇಲಿನ ಸ್ವರಕ್ಕೆ ಹೋಗಿ ನಿಲ್ಲುವುದು. 12 ಅಥವಾ ಹೆಚ್ಚು ಮಾತ್ರೆಗಳ ಕಾಲವಿರಬೇಕೆಂಬ ನಿಯಮವೂ ಉಂಟು.

ಉದಾಹರಣೆ—ಪಾ೯೯೯೯೯೯೯೯೯೯೯೯ಧ ಹೀಗೆ.

(12) **ಗುಂಫಿತ**—ಇದನ್ನು ಹುಂಪಿತವೆಂದೂ ಕರೆಯುವರು. ಆರೋಹಣ ಅವರೋಹಣಗಳಲ್ಲಿ ಹುಂಕಾರದೊಡನೆ ಸ್ಫುರಿಸುವುದು.

(13) **ಮುದ್ರಿತ**—ಬಾಯನ್ನು ಮುಚ್ಚಿಕೊಂಡು ಹಾಡುವುದು.

(14) **ನಾಮಿತ**—ನಾದವನ್ನು ಗಾತ್ರ ಕಡಮೆ ಮಾಡಿ ಹಾಡುವುದು ಮತ್ತು ಕದಲಿಸುವುದು.

(15) **ಮಿಶ್ರಿತ**—ಮೇಲೆ ಹೇಳಿದವುಗಳಲ್ಲಿ ಕೆಲವನ್ನಾಗಲೀ ಎರಡು ಮೂರನ್ನಾಗಲೀ ಮಿಶ್ರಮಾಡಿ ಹಾಡುವುದು.

ಲೀನ, ಆಂದೋಳಿತ, ಪ್ಲಾವಿತ ಇವು ಮೂರು ಗಮಕಗಳೂ ಕಂಪಿತ ಗಮಕ ಭೇದಗಳೇ ಆಗಿವೆ.

ರೂಢಿಯಲ್ಲಿನ ದಶವಿಧ ಗಮಕಗಳು

(1) **ಆರೋಹಣ**—ಸರಿಗಮಪಧನಿಸ.

(2) **ಅವರೋಹಣ**—ಸನಿಧಪಮಗರಿಸ.

(3) **ಢಾಲು**—ಸಗ, ಸಮ, ಸಪ, ಗಧ, ಮನಿ.

(4) **ಸ್ಫುರಿತ**—ಸಸ, ರಿರಿ, ಗಗ, ಮಮ, ಪಪ.

(5) **ಕಂಪಿತ**—ಗಾಗಗಗಗ, ಪಾಪಪಪಪ, ನೀನಿನಿನಿನಿ.

(6) **ಆಹತ**—ಸರಿ, ರಿಗ, ಗಮ, ಮಪ, ಪಧ.

(7) **ಪ್ರತ್ಯಾಹತ**—ಸನಿ, ನಿಧ, ಧಪ, ಪಮ, ಮಗ, ಗರಿ.

(8) **ತ್ರಿಪುಚ್ಛ**—ಸಸಸ, ರಿರಿರಿ, ಗಗಗ, ಮಮಮ, ಪಪಪ.

(9) **ಆಂದೋಳನ**—ಸರಿಸ ಮಾಮ, ರಿಗರಿ ಪಾಪ, ಗಮಗ ನೀನಿ

(10) **ಮೂರ್ಛನ**—ಸರಿಗಮಪಧಾ೯೯, ಮಪಧನಿಸಾ೯೯೯೯.

ರಾಗ ಪ್ರಕರಣ

ಸ್ವರ ವರ್ಣಗಳಿಂದ ಅಲಂಕೃತವಾಗಿ, ಕೇಳುವವರ ಮನಸ್ಸಿಗೆ ರಂಜನೆಯನ್ನುಂಟುಮಾಡುವುದಾಗಿರುವ ಧ್ವನಿವಿಶೇಷವೇ ರಾಗವೆನಿಸುವುದು.

ಗ್ರಹ, ಅಂಶ, ನ್ಯಾಸ ಲಕ್ಷಣಗಳನ್ನು ಜಾತಿ ಪ್ರಕರಣ, ರಾಗ ಪ್ರಕರಣಗಳಲ್ಲಿ ಎರಡು ಕಡೆ ಹೇಳಿದೆ. ಆದ್ದರಿಂದ ಜಾತಿಗೂ, ರಾಗಕ್ಕೂ ಗ್ರಹ, ಅಂಶ, ನ್ಯಾಸ ಲಕ್ಷಣಗಳುಂಟು. ಆದರೆ ಜಾತಿಗಳನ್ನು ಅನುಸರಿಸಿ ರಾಗ ವಿನ್ಯಾಸ ಮಾಡುವುದು ಕಷ್ಟಸಾಧ್ಯ.

(1) **ಗ್ರಹ**—ರಾಗ ಸಂಗತಿಗಳಲ್ಲಿ ಪ್ರಾರಂಭದ ಸ್ಥಾನದಲ್ಲಿರುವ ಸ್ವರವೇ ಗ್ರಹಸ್ವರ. ರಾಗದಲ್ಲಿ ಷಡ್ಜಸ್ವರವೇ ಗ್ರಹಾಂಶನ್ಯಾಸ ಸ್ವರವಾಗಿರಬೇಕೆಂದೇ ಕೆಲವರ ಮತ.

(2) **ಅಂಶ**—ರಾಗ ಹಾಡುವಾಗ ರಾಗಕಳೆಯನ್ನು ತೋರಿಸಲು ಪದೇ ಪದೇ ಬರುವ ಸ್ವರವೇ ಅಂಶಸ್ವರ.

(3) **ನ್ಯಾಸ**—ರಾಗಗಳಲ್ಲಿ ಅಥವಾ ಸಂಗತಿಗಳಲ್ಲಿ ಬರುವ ಕೊನೆಯ ಸ್ವರವೇ ನ್ಯಾಸಸ್ವರ.

(4) **ಮಂದ್ರ**—ಮಂದ್ರಸ್ಥಾಯಿ ಅಥವಾ ತಗ್ಗುಸ್ಥಾಯಿಯಲ್ಲಿ ಹಾಡುವ ಸ್ವರಗಳೇ ಮಂದ್ರಸ್ವರಗಳು.

(5) **ತಾರ**—ಉಚ್ಚಸ್ವರ, ತಾರಸ್ಥಾಯಿಯಲ್ಲಿ ಎತ್ತರಿಸಿ ಹಾಡುವ ಸ್ವರಗಳೇ ತಾರಸ್ವರಗಳು.

(6) **ಅಪನ್ಯಾಸ**—ರಾಗವನ್ನು ಹಾಡುವಾಗ ಮಧ್ಯೆಮಧ್ಯೆ ಮುಗಿಸುವ ಸ್ವರಗಳೇ ಅಪನ್ಯಾಸ ಸ್ವರಗಳು.

(7) **ಸನ್ಯಾಸ**—ರಾಗವನ್ನು ತುಂಡುತುಂಡಾಗಿ ಹಾಡುವಾಗ ಮಧ್ಯಮಧ್ಯದ ಸ್ವರಗಳು ರಾಗಭಾವವನ್ನು ತಿಳಿಸುತ್ತವೆ. ಅವುಗಳು ಸನ್ಯಾಸ ಸ್ವರಗಳೆನಿಸುವುವು.

(8) **ವಿನ್ಯಾಸ**—ಖಂಡಸ್ವರಗಳಿಗೆ ಅವಯವಗಳಂತೆ ಇರುವ ಸ್ವರಗಳೇ ವಿನ್ಯಾಸ ಸ್ವರಗಳು.

(9) **ಅಲ್ಪತ್ವ**—ರಾಗದಲ್ಲಿ ಸ್ವಲ್ಪಸ್ವಲ್ಪವಾಗಿ ಪ್ರಯೋಗವಾಗುವ ಸ್ವರಗಳು ಅಲ್ಪತ್ವಸ್ವರಗಳು. ಈ ಅಲ್ಪತ್ವದಲ್ಲಿ ಅನಭ್ಯಾಸವೆಂದೂ, ಲಂಘನ ವೆಂದೂ ಎರಡು ವಿಧ.

(ಅ) **ಅನಭ್ಯಾಸ**—ಒಂದು ಸ್ವರವು ಯಾವಾಗಲೋ ಒಂದು ಸಾರಿ ಬರುವುದು.

(ಆ) **ಲಂಘನ**—ಒಂದು ಸ್ವರದ ಮುಂದಿನ ಸ್ವರವನ್ನು ಬಿಟ್ಟು ಅದರ ಮುಂದಿನ ಸ್ವರವನ್ನು ದಾಟುವುದು.

(10) **ಬಹುತ್ವ**—ರಾಗದಲ್ಲಿ ಅನೇಕವೇಳೆ ಉಪಯೋಗವಾಗುತ್ತಿರುವ ಸ್ವರಕ್ಕೆ ಬಹುತ್ವವೆಂದು ಹೆಸರು. ಇದರಲ್ಲಿ **ಅಭ್ಯಾಸ,** ಅಲಂಘನ ಎಂದ ಎರಡು ವಿಧ.

(ಅ) **ಅಭ್ಯಾಸ**—ಒಂದು ಸ್ವರವು ಮುಖ್ಯವಲ್ಲದಿದ್ದರೂ ಪದೇಪದೇ ಬರುವುದು.

(ಆ) **ಅಲಂಘನ**—ರಾಗದಲ್ಲಿ ಯಾವಾಗಲೂ ಬಿಡದೆ ಹಾಡತಕ್ಕ ಸ್ವರ.

ಮೇಲಿನ ಹತ್ತು ವಿಧವಾದ ರಾಗಲಕ್ಷಣಗಳು ರೂಢಿಯಲ್ಲಿರುವುದು ಸವ ವಿದಿತವಾದದ್ದೇ ಆಗಿದೆ.

ದೇಶ್ಯ ರಾಗಗಳು

ರಾಗಾಂಗ, ಉಪಾಂಗ, ಭಾಷಾಂಗ, ಕ್ರಿಯಾಂಗಗಳೆಂದು ನಾ ವಿಧಗಳು.

(1) **ರಾಗಾಂಗ** ರಾಗಗಳು—ಜನ್ಯರಾಗದ ಜನಕಸ್ಥಾನದಲ್ಲಿರ ಎಲ್ಲ ಸಂಪೂರ್ಣ ರಾಗಗಳೂ **ರಾಗಾಂಗ** ರಾಗಗಳು.

(2) **ಉಪಾಂಗ** ರಾಗಗಳು—ರಾಗಾಂಗರಾಗ ಅಥವಾ ಮೇಳಕ ಗಳಲ್ಲಿ ಹುಟ್ಟಿರುವ ಜನ್ಯರಾಗಗಳು **ಉಪಾಂಗ**ಗಳು.

ಉದಾಹರಣೆ—ಮೋಹನ, ಹಂಸಧ್ವನಿ, ಸಾವು, ಕೇತಾರಗೌಳ, ಇತ್ಯಾದಿ.

(3) **ಭಾಷಾಂಗ** ರಾಗಗಳು—ಒಂದು ರಾಗದಲ್ಲಿ ಹುಟ್ಟಿ ತನ್ನ ರಾಗಾಂಗರಾಗದಲ್ಲಿನ ಪ್ರಕೃತಿ, ವಿಕೃತಿ ಸ್ವರಗಳಲ್ಲದೆ ಬೇರೆ ರಾಗಾಂಗದ ವಿಕೃತಿ ಸ್ವರಗಳಲ್ಲಿ ಒಂದೋ ಎರಡೊ ಅಥವಾ ಹೆಚ್ಚಿನ ಸ್ವರಗಳನ್ನು ಸೇರಿಸಿಕೊಂಡಿರುವ ರಾಗವು **ಭಾಷಾಂಗ** ರಾಗ.

ಉದಾಹರಣೆ——ಕಾಂಭೋಜಿ, ಬಿಲಹರಿ, ಆನಂದಭೈರವಿ.

(4) **ಕ್ರಿಯಾಂಗ** ರಾಗಗಳು—ಇಂದ್ರಿಯಗಳಿಗೆ ಉತ್ಸಾಹವನ್ನೂ, ಕರುಣೆಯನ್ನೂ ಹುಟ್ಟಿಸುವ ರಾಗವು **ಕ್ರಿಯಾಂಗ** ರಾಗವೆನಿಸುವುದು.

ಯುದ್ಧ ಮಾಡುವಾಗ ಉತ್ಸಾಹಕಾರಿಯಾದದ್ದು. ಕಷ್ಟಕಾಲದಲ್ಲಿ ಕರುಣಾರಸಕಾರಿಯಾದದ್ದು.

ಶ್ಲೋ|| ಕರುಣೋತ್ಸಾಹ ಸಂಯುಕ್ತಂ ಕ್ರಿಯಾಂಗಂ ತೇನ ಹೇತುನಾ ||

—(ಸಂಗೀತ ರತ್ನಾಕರ)

ಮತಂಗನು ದೇಶ್ಯರಾಗಗಳನ್ನು ಶುದ್ಧ, ಛಾಯಾಂಗ, ಸಂಕೀರ್ಣ ಎಂದು ಬೇರೆ ವಿಧವಾಗಿ ಹೇಳಿದ್ದಾನೆ.

ಒಂದೇ ರಾಗದ ಕಳೆಯನ್ನು ಹೇಳುವುದಕ್ಕೆ ಶುದ್ಧರಾಗವೆಂದೂ, ಇತರ ರಾಗದ ಕಳೆಯನ್ನು ಸೇರಿಸಿಕೊಂಡು ಹೇಳುವುದು ಛಾಯಾಲಗವೆಂದೂ, ಅನೇಕ ರಾಗಗಳ ಕಳೆಗಳನ್ನು ಸೇರಿಸಿ ಹಾಡುವ ರಾಗವು ಸಂಕೀರ್ಣರಾಗವೆಂದೂ ಹೇಳಿದ್ದಾನೆ.

ಉದಾಹರಣೆ—**ಶುದ್ಧ** ರಾಗಕ್ಕೆ ದೇವಕ್ರಿಯಾ, ಕಲ್ಯಾಣಿ, ಕಾಂಭೋಜಿ, ಸಾಹುಳೀ, ಭಾಂಡೀ, ಗುಂಡಕ್ರಿಯಾ, ವರಾಳಿ, ಮುಖಾರಿ.

ಸಾಲಗಕ್ಕೆ (ಛಾಯಾಲಗಕ್ಕೆ) ದೇಶಿ, ಭಲ್ಲಾತೀ, ಕುರಂಜಿ, ಶಂಕರಾಭರಣ, ಬಿಲಹರಿ, ಚೌಳಿ, ರಾಮಕ್ರಿಯಾ, ಆಹಿರಿ.

ರಾಗಗಳನ್ನು ಸ್ತ್ರೀರಾಗಗಳು, ಪುರುಷರಾಗಗಳು, ದೂತಿರಾಗಗಳು, ಸಂಕರರಾಗಗಳು, ಪುತ್ರರಾಗಗಳು, ಮಿತ್ರರಾಗಗಳು ಎಂದು ವಿಂಗಡಿಸಿದ್ದಾರೆ.

ಪುರುಷ ರಾಗಗಳು—ಭೈರವಿ, ಭೂಪಾಲ, ಶ್ರೀರಾಗ, ಫಲಮಂಜರಿ, ವಸಂತ, ಮಾಳವ, ಬಂಗಾಳ, ನಾಟ.

ಈ ಪುರುಷರಾಗಗಳ ಪತ್ನಿಯರಾದ ಸ್ತ್ರೀರಾಗಗಳು—

1. ದೇವಕ್ರಿಯಾ, ಮೇಘರಂಜಿ, ಕುರಂಜಿ—ಭೈರವಿರಾಗ ಪತ್ನಿಯರು.
2. ಬಿಲಹರಿ, ಮಲಹರಿ, ಭಾಂಡೀ—ಭೂಪಾಲರಾಗ ಪತ್ನಿಯರು.
3. ಆಂಧಾಳೀ, ಭಲ್ಲಾತೀ, ಸಾಹುಳೀ—ಶ್ರೀರಾಗದ ಪತ್ನಿಯರು.
4. ದೇಶಿ, ಮುಖಾರಿ, ಲಲಿತಾ—ಫಲಮಂಜರಿ ರಾಗದ ಪತ್ನಿಯರು.
5. ರಾಮಕ್ರಿಯಾ, ವರಾಳಿ, ಗೌಳ—ವಸಂತರಾಗದ ಪತ್ನಿಯರು.
6. ಗುಂಡಕ್ರಿಯಾ, ಘೂರ್ಜರಿ, ಚೌಳೀ—ಮಾಳವರಾಗದ ಪತ್ನಿಯರು.
7. ಕಲ್ಯಾಣಿ, ಆಹಿರಿ, ಸಾವೇರಿ—ಬಂಗಾಳರಾಗದ ಪತ್ನಿಯರು.
8. ಘಂಟಾರವ, ಕಾಂಭೋಜಿ, ಶಂಕರಾಭರಣ—ನಾಟರಾಗದ ಪತ್ನಿಯರು.

ದೂತಿರಾಗಗಳು—ಭೈರವಿಗೆ ಕನ್ನಡಾ, ಭೂಪಾಲಕ್ಕೆ ದೇಶಾಕ್ಷಿ ಮತ್ತು ದೇವಗಾಂಧಾರಿ, ಶ್ರೀರಾಗಕ್ಕೆ ದೇಶಿ, ಫಲಮಂಜರಿಗೆ ಅಸಾವೇರಿ, ವಸಂತಕ್ಕೆ ಮೋಹನ, ಮಾಳವಕ್ಕೆ ಹಿಂದೋಳ, ಬಂಗಾಳಕ್ಕೆ ಭೋಗಿ, ನಾಟಕ್ಕೆ ವರಾಳಿ.

ಸಂಕರ ರಾಗಗಳು—ಮೇಘರಂಜಿ, ಮಲಹರೀ, ಮಂದಾರಿ, ಘೂರ್ಜರಿ, ಘಂಟಾರವ, ಲಲಿತಾ, ಗೌಳ, ಸಾವೇರಿ.

ಪುತ್ರರಾಗಗಳು—ಕಾಪಿ, ರೇಗುಪ್ತಿ, ನೀಲಾಂಬರಿ—ಮಾರುವಾ, ರಾಮಗಿರಿ—ಸಾರಂಗಾ, ಮಂದಾರಿ, ಸೌರಾಷ್ಟ್ರ, ಕೇದಾರ—ಮುಖಾರಿ, ಲಲಿತ, ತೋಡಿ, ಧನ್ಯಾಸಿ—ನಾರಾಯಣಿ, ಗೌರಿ—ಪಂತುವರಾಳಿ, ವರಾಳಿ, ಗೌಳ—ಪೂರ್ವಿ, ಸಾವೇರಿ, ಬೇಗಡೆ, ಚೌಳಿ—ಮನೋಹರಿ, ಯಮುನಾ —ಇವುಗಳು ಮೇಲೆ ಹೇಳಿದ ಎಂಟು ಪುರುಷರಾಗಗಳ ಕ್ರಮವಾದ ಪುತ್ರರು.

ನಾಮಸಾದೃಶ್ಯದಿಂದ ಕೆಲವು ರಾಗಗಳಿವೆ.

ಉದಾಹರಣೆ—ಗೌಡಮಲ್ಲಾರ, ಸಾಮಂತಮಲ್ಲಾರ, ಚೆಂಚುಮಲ್ಲಾರ. ಭೈರವಿ, ಸಾಳಗಭೈರವಿ, ವಸಂತಭೈರವಿ, ಆನಂದಭೈರವಿ. ವರಾಳಿ, ನಾಗವರಾಳಿ, ಪುನ್ನಾಗವರಾಳಿ, ಶೋಕವರಾಳಿ, ಪಂತುವರಾಳಿ. ಕಾಂಭೋಜಿ, ಹರಿಕಾಂಭೋಜಿ, ಗುಮ್ಮಕಾಂಭೋಜಿ, ಯದುಕುಲ ಕಾಂಭೋಜಿ, ಗೋಪಿ ಕಾಂಭೋಜಿ, ಚೆಂಚು ಕಾಂಭೋಜಿ. ನಾಟ, ಗಂಭೀರನಾಟ, ಛಾಯಾನಾಟ, ಸಾರಂಗನಾಟ, ಸಾಳಂಗನಾಟ, ಪ್ರತಾಪನಾಟ. ಗೌಳ, ರೀತಿಗೌಳ, ಮಾಳವಗೌಳ, ಕೇತಾರಗೌಳ, ನಾರಾಯಣಗೌಳ, ಛಾಯಾಗೌಳ.

ರಾಗಕಾಲ ನಿರ್ಣಯ

1. ಉದಯಾತ್ಪೂರ್ವ 3 ರಿಂದ 6ರ ವರೆಗೆ—
   ದೇಶಾಕ್ಷಿ, ದೇವಗಾಂಧಾರಿ, ಭಾಂಡಿ, ಧನ್ಯಾಸಿ, ಮಾರುವ, ದೇವಕ್ರಿಯಾ, ಮುಂದಾಳಿ, ಗೌರಿ, ಭೂಪಾಲ ಇವುಗಳು.

2. ಪ್ರಾತಃಕಾಲ 6 ರಿಂದ 9ರ ವರೆಗೆ—
   ಕುರಂಜಿ, ಸಾವುಳಿ, ಘಂಟಾರವ, ರಾಮಕ್ರಿಯ, ಬಿಲಹರಿ, ಮಲಹರಿ, ಮುಖಾರಿ, ಯಮುನಾ, ರೇಗುಪ್ತಿ, ಭೈರವಿ.

3. ಮಧ್ಯಾಹ್ನಾತ್ಪೂರ್ವ 9 ರಿಂದ 12ರ ವರೆಗೆ—
   ಮೇಘರಂಜಿ, ಸಾರಂಗ, ಭಲ್ಲಾತಿ, ಮಧ್ಯಮಾವತಿ, ದೇತಿ, ನೀಲಾಂಬರಿ, ಮಂಗಳದೇಶಿಕಾ, ಶ್ರೀರಾಗ.

4. ಮಧ್ಯಾಹ್ನಾತ್ಪರ 12 ರಿಂದ 3ರ ವರೆಗೆ—
   ಮೋಹನ, ಕಲ್ಯಾಣಿ, ಕಾಪಿ, ಘೂರ್ಜರಿ, ಶಂಕರಾಭರಣ, ಪೂರ್ವಿ, ವಸಂತ.

5. ಸಾಯಂಕಾಲ 3 ರಿಂದ 6ರ ವರೆಗೆ—
   ನಾರಾಯಣಿ, ಹಿಂದೋಳ, ಸೌರಾಷ್ಟ್ರ, ತೋಡಿ, ರಾಮಳಿ, ಗೌರಿ, ವರಾಳಿ, ಪಂತುವರಾಳಿ, ಹುಸೇನಿ, ಮಾಳವಿ, ಲಲಿತ.

6. ಸಾಯಂಕಾಲ 6 ರಿಂದ ರಾತ್ರಿ 9ರ ವರೆಗೆ—
   ವೇಳಾವಳಿ, ಕಾಂಭೋಜಿ, ಸಾವೇರಿ, ಬೇಗಡೆ, ಪುನ್ನಾಗ, ನಾಟ.

7. ರಾತ್ರಿ 9 ರಿಂದ 12ರ ವರೆಗೆ—

ಗುಂಡಕ್ರಿಯ, ಮನೋಹರಿ, ಮಂಗಳ ಕೈಶಿಕಿ, ಕೇದಾರ, ಆಹಿರಿ, ಅಸಾವೇರಿ, ಬಂಗಾಳ, ಜಾಳಿ.

8. ರಾತ್ರಿ 12 ರಿಂದ ಬೆಳಗಿನಝಾವ 3ರ ವರೆಗೆ—

ಜೋಗಿಸೀ, ಚಿತ್ರವೇಳೆ, ಕರ್ಣಾಟ, ಸುರಟಿ, ಮಂಜರಿ.

ರಾಗ ಭೇದಗಳು

ಸಂಪೂರ್ಣ, ಷಾಡವ, ಔಡವ ಎಂದು ರಾಗಗಳು ಮೂರು ಭೇದಗಳು.

ಸಂಪೂರ್ಣ—ಆರೋಹಣ ಅವರೋಹಣಗಳಲ್ಲಿ ಏಳೇಳು ಸ್ವರಗಳು ವರಸೆಯಾಗಿ (ಕ್ರಮವಾಗಿ) ಬರುವ ರಾಗವು ಸಂಪೂರ್ಣ ರಾಗವೆನಿಸುವುದು. ಇವುಗಳು 72 ಮೇಳಕರ್ತ ರಾಗಗಳು.

ಮೇಳಕರ್ತ ರಾಗಗಳಲ್ಲಿ 36 ಶುದ್ಧ ಮಧ್ಯಮ ರಾಗಗಳು. 36 ಪ್ರತಿ ಮಧ್ಯಮ ರಾಗಗಳು. ಇವುಗಳನ್ನು ಒಂದೊಂದು ಚಕ್ರಕ್ಕೆ 6 ರಾಗಗಳುಳ್ಳ 12 ಚಕ್ರಗಳಾಗಿ ವಿಂಗಡಿಸಲ್ಪಟ್ಟಿರುವುವು. ಈ ಹನ್ನೆರಡು ಚಕ್ರಗಳ ಹೆಸರುಗಳು ಕ್ರಮವಾಗಿ ಇಂದು, ನೇತ್ರ, ಅಗ್ನಿ, ವೇದ, ಬಾಣ, ಋತು, ಋಷಿ, ವಸು, ಬ್ರಹ್ಮ, ದಿಕ್ಕು, ರುದ್ರ, ಆದಿತ್ಯ.

ಷಾಡವ—ಆರೋಹಣ ಅವರೋಹಣಗಳಲ್ಲಿ ಆರಾರು ಸ್ವರಗಳು ಬರುವುದು ಷಾಡವ ರಾಗ.

ಸಪ್ತಸ್ವರಗಳಲ್ಲಿ ಒಂದೊಂದನ್ನು ಬಿಟ್ಟು ಕೂಡಿದ ರಾಗವು 6 ಆಗುವುದು. ಷಡ್ಜವು ಸರ್ವರಾಗಗಳಿಗೂ ಆಧಾರವಾದದ್ದು.

ಔಡವ—ಆರೋಹಣ ಅವರೋಹಣಗಳಲ್ಲಿ 5 ಸ್ವರಗಳುಳ್ಳ ರಾಗಗಳು ಔಡವ ರಾಗಗಳು.

ಉದಾಹರಣೆ—

(1) ಸರಿಗಮನಿಸ - ಸನಿಮಗರಿಸ ಇದು ಶುದ್ಧ ಔಡವ.

(2) ಸರಿಗಪನಿಸ - ಸನಿಪಗರಿಸ ಇದು ಸಂಕೀರ್ಣ ಔಡವ.

(3) ಸರಿಗಪನಿಪಸ - ಸಪ, ನಿಪ, ಗರಿಸ ವಕ್ರ ಔಡವ.

ಸಂಪೂರ್ಣ ರಾಗಕ್ಕೆ 1 ಭೇದ
ಷಾಡವ ರಾಗಕ್ಕೆ 6 ಭೇದಗಳು
ಔಡವ ರಾಗಕ್ಕೆ 15 ಭೇದಗಳು ಆಗುವುವು.

	ಆರೋಹಣ	ಅವರೋಹಣ	ಭೇದಗಳು
1.	ಸಂಪೂರ್ಣ	ಸಂಪೂರ್ಣ	1
2.	ಸಂಪೂರ್ಣ	ಷಾಡವ	6
3.	ಸಂಪೂರ್ಣ	ಔಡವ	15
4.	ಷಾಡವ	ಸಂಪೂರ್ಣ	6
5.	ಔಡವ	ಸಂಪೂರ್ಣ	15
6.	ಷಾಡವ	ಷಾಡವ	36
7.	ಷಾಡವ	ಔಡವ	90
8.	ಔಡವ	ಷಾಡವ	90
9.	ಔಡವ	ಔಡವ	225
		ಮೊತ್ತ	484

ಒಟ್ಟು 484 ಜನ್ಯರಾಗಗಳು ಪ್ರತಿಯೊಂದು ಮೇಳಕರ್ತ (ಅಥವಾ ಜನಕ) ರಾಗದಲ್ಲಿಯೂ ಉತ್ಪತ್ತಿಯಾಗುತ್ತವೆ. ಮೇಳಕರ್ತಗಳು 72 ಇರುವುದರಿಂದ ಒಟ್ಟಿಗೆ 484 × 72 = 34,848 ರಾಗಗಳು ಆಗುವುವು.

ಈ ಮೇಲ್ಕಂಡ ಎಲ್ಲ ರಾಗಗಳನ್ನು ಇನ್ನೊಂದು ವಿಭಾಗವಾಗಿ ಘನ, ನಯ, ದೇಶ್ಯಗಳೆಂದು 3 ಭಾಗಗಳಾಗಿ ವಿಂಗಡಿಸಿದ್ದಾರೆ.

ಘನರಾಗಗಳು—ನಾಟ, ಗೌಳ, ವರಾಳಿ, ಆರಭಿ, ಶ್ರೀರಾಗ, ಕೇದಾರ, ನಾರಾಯಣಗೌಳ, ರೀತಿಗೌಳ, ಸಾರಂಗನಾಟ, ಚೌಳಿ (ಬಾಹುಲಿ).

ಈ ಘನರಾಗಗಳು ನಾಭಿಯಿಂದ ಹೊರಡುವ ಗಾನಕ್ರಿಯೆ. ಯುದ್ಧ ರಂಗದಲ್ಲಿ ಶೂರನಿರುವಂತೆ ರಾಗಗಳಲ್ಲಿ ಇವು ಗಂಭೀರವಾಗಿಯೂ, ಘನವಾಗಿಯೂ ಇವೆ. ಈ ಹತ್ತು ರಾಗಗಳನ್ನೇ ಘನರಾಗಗಳೆಂದು ಪೂರ್ವಾಚಾರ್ಯರುಗಳು ಹೇಳಿದ್ದಾರೆ.

ನಯರಾಗಗಳು—ರಂಜನೆಯುಳ್ಳದ್ದಾಗಿಯೂ (ರಕ್ತಿಯಾಗಿಯೂ) ಸ್ತ್ರೀಯರಂತೆ ಮೃದುವಾಗಿಯೂ ಇರುತ್ತವೆ. ಇವುಗಳನ್ನೇ ಮಾರ್ಗರಾಗಗಳೆಂದು ಕರೆದಿದ್ದಾರೆ. ಕೇಳುವವರ ಮನಸ್ಸಿಗೆ ಆನಂದ ಉಂಟುಮಾಡುವ ರಾಗ. ಘನರಾಗಗಳು ದೇಶ್ಯರಾಗಗಳ ವಿನಹ ಮಿಕ್ಕವುಗಳೆಲ್ಲವೂ ನಯರಾಗಗಳೆಂದೇ ಕೆಲವರ ಅಭಿಪ್ರಾಯ.

ದೇಶ್ಯರಾಗಗಳು—ಉತ್ತರದೇಶದ ರಾಗಗಳಲ್ಲಿ ಕೆಲವು ಇಲ್ಲಿಗೆ ಬಂದು ರೂಢಿಯಲ್ಲಿವೆ.

ಉದಾಹರಣೆ—ಫರಜು, ಕಮಾಚು, ಕಾಪಿ, ದರ್ಬಾರು, ಇತ್ಯಾದಿ ರಾಗಗಳು.

72 ಮೇಳಕರ್ತ ರಾಗಗಳನ್ನು 12 ಚಕ್ರಗಳನ್ನಾಗಿ ವಿಭಾಗಿಸಿದ್ದಾರಷ್ಟೆ. ಈ ಹನ್ನೆರಡು ಚಕ್ರಗಳಲ್ಲಿ 1ನೇ ಚಕ್ರದ 6 ಮೇಳರಾಗಗಳೂ, 6ನೇ ಚಕ್ರದ 6 ಮೇಳರಾಗಗಳೂ, 7ನೇ ಚಕ್ರದ 6 ಮೇಳರಾಗಗಳೂ, 12ನೇ ಚಕ್ರದ 6 ಮೇಳರಾಗಗಳೂ 2, 3, 4, 5, 8, 9, 10, 11ನೇ ಚಕ್ರಗಳ ಒಂದೊಂದರಲ್ಲೂ 1ನೇ ಮತ್ತು 6ನೇ ಮೇಳರಾಗಗಳು $8 \times 2 = 16$ ರಾಗಗಳೂ ಸೇರಿ ಒಟ್ಟು 40 ರಾಗಗಳು ವಿವಾದಿ ದೋಷದಿಂದ ಕೂಡಿರುವ ಕಾರಣ ಮಿಕ್ಕ 32 ಮೇಳರಾಗಗಳೇ ವಿವಾದಿ ದೋಷಗಳಿಲ್ಲದ ರಾಗಗಳಾಗಿವೆ. ಅವುಗಳು ಹಾಡಲು ಸುಲಭ, ಕಿವಿಗೆ ಇಂಪು. ಅವುಗಳಲ್ಲೇ ಕೀರ್ತನೆಗಳು, ಮಟ್ಟುಗಳು ಹೆಚ್ಚಾಗಿವೆ. ಮುಂದಿನ ಪಥಕದಲ್ಲಿ ವಿಕೃತಸ್ವರಗಳನ್ನು ಮಾತ್ರ ತೋರಿಸಿರುವುದು. ಸ, ಪ ಇವೆರಡೂ ಎಲ್ಲಾ ರಾಗಗಳಿಗೂ ಉಂಟು.

	ಶುದ್ಧ ಮಧ್ಯಮ ರಾಗಗಳ ಹೆಸರು (ಮ$_1$)	ಇತರ ವಿಕೃತ ಸ್ವರಗಳು	ಪ್ರತಿ ಮಧ್ಯಮ ರಾಗಗಳ ಹೆಸರು (ಮ$_2$)	
೧ನೆಯ ಚಕ್ರ	1. ಕನಕಾಂಗಿ	ರಿ$_1$ ಗ$_1$ ಧ$_1$ ನಿ$_1$	37. ಸಾಲಗ	೭ನೆಯ ಚಕ್ರ
	2. ರತ್ನಾಂಗಿ	ರಿ$_1$ ಗ$_1$ ಧ$_1$ ನಿ$_2$	38. ಜಲಾರ್ಣವ	
	3. ಗಾನಮೂರ್ತಿ	ರಿ$_1$ ಗ$_1$ ಧ$_1$ ನಿ$_3$	39. ಝಾಲವರಾಳಿ	
	4. ವನಸ್ಪತಿ	ರಿ$_1$ ಗ$_1$ ಧ$_2$ ನಿ$_2$	40. ನವನೀತ	
	5. ಮಾನವತಿ	ರಿ$_1$ ಗ$_1$ ಧ$_2$ ನಿ$_3$	41. ಪಾವನಿ	
	6. ತಾನರೂಪಿ	ರಿ$_1$ ಗ$_1$ ಧ$_3$ ನಿ$_3$	42. ರಘುಪ್ರಿಯ	
೨ನೆಯ ಚಕ್ರ	7. ಸೇನಾಪತಿ	ರಿ$_1$ ಗ$_2$ ಧ$_1$ ನಿ$_1$	43. ಗವಾಂಬೋಧಿ	೮ನೆಯ ಚಕ್ರ
	8. ಹನುಮತೋಡಿ	ರಿ$_1$ ಗ$_2$ ಧ$_1$ ನಿ$_2$	44. ಭವಪ್ರಿಯ	
	9. ಧೇನುಕ	ರಿ$_1$ ಗ$_2$ ಧ$_1$ ನಿ$_3$	45. ಶುಭಪಂತುವರಾಳಿ	
	10. ನಾಟಕಪ್ರಿಯ	ರಿ$_1$ ಗ$_2$ ಧ$_2$ ನಿ$_2$	46. ಷಡ್ವಿಧಮಾರ್ಗಿಣಿ	
	11. ಕೋಕಿಲಪ್ರಿಯ	ರಿ$_1$ ಗ$_2$ ಧ$_2$ ನಿ$_3$	47. ಸುವರ್ಣಾಂಗಿ	
	12. ರೂಪವತಿ	ರಿ$_1$ ಗ$_2$ ಧ$_3$ ನಿ$_3$	48. ದಿವ್ಯಮಣಿ	

	ಶುಧ್ಧ ಮಧ್ಯಮ ರಾಗಗಳ ಹೆಸರು (ಮ$_1$)	ಇತರ ವಿಕೃತ ಸ್ವರಗಳು	ಪ್ರತಿ ಮಧ್ಯಮ ರಾಗಗಳ ಹೆಸರು (ಮ$_2$)	
೩ನೆಯ ಚಕ್ರ	13. ಗಾಯಕಪ್ರಿಯ	ರಿ$_1$ ಗ$_3$ ಧ$_1$ ನಿ$_1$	49. ಧವಳಾಂಬರಿ	೯ನೆಯ ಚಕ್ರ
	14. ವಕುಳಾಭರಣ	ರಿ$_1$ ಗ$_3$ ಧ$_1$ ನಿ$_2$	50. ನಾಮನಾರಾಯಿಣಿ	
	15. ಮಾಯಾಮಾಳವಗೌಳ	ರಿ$_1$ ಗ$_3$ ಧ$_1$ ನಿ$_3$	51. ಕಾಮವರ್ಧಿನಿ	
	16. ಚಕ್ರವಾಕ	ರಿ$_1$ ಗ$_3$ ಧ$_2$ ನಿ$_2$	52. ರಾಮಪ್ರಿಯ	
	17. ಸೂರ್ಯಕಾಂತ	ರಿ$_1$ ಗ$_3$ ಧ$_2$ ನಿ$_3$	53. ಗಮನಶ್ರಮ	
	18. ಹಾಟಕಾಂಬರಿ	ರಿ$_1$ ಗ$_3$ ಧ$_3$ ನಿ$_3$	54. ವಿಶ್ವಂಭರಿ	
೪ನೆಯ ಚಕ್ರ	19. ಝುಂಕಾರಧ್ವನಿ	ರಿ$_2$ ಗ$_2$ ಧ$_1$ ನಿ$_1$	55. ಶ್ಯಾಮಲಾಂಗಿ	೧೦ನೆಯ ಚಕ್ರ
	20. ನಠಭೈರವಿ	ರಿ$_2$ ಗ$_2$ ಧ$_1$ ನಿ$_2$	56. ಷಣ್ಮುಖಪ್ರಿಯ	
	21. ಕೀರವಾಣಿ	ರಿ$_2$ ಗ$_2$ ಧ$_1$ ನಿ$_3$	57. ಸಿಂಹೇಂದ್ರಮಧ್ಯಮ	
	22. ಖರಹರಪ್ರಿಯ	ರಿ$_2$ ಗ$_2$ ಧ$_2$ ನಿ$_2$	58. ಹೈಮವತಿ	
	23. ಗೌರೀಮನೋಹರಿ	ರಿ$_2$ ಗ$_2$ ಧ$_2$ ನಿ$_3$	59. ಧರ್ಮವತಿ	
	24. ವರುಣಪ್ರಿಯ	ರಿ$_2$ ಗ$_2$ ಧ$_3$ ನಿ$_3$	60. ನೀತಿಮತಿ	

ಚಕ್ರ ನಂ ೫	25. ಮಾರರಂಜನಿ	ರಿ$_2$ ಗ$_3$ ಧ$_1$ ನಿ$_1$	61. ಕಾಂತಾಮಣಿ	ಚಕ್ರ ನಂ ೧೧
	26. ಚಾರುಕೇಶಿ	ರಿ$_2$ ಗ$_3$ ಧ$_1$ ನಿ$_2$	62. ರಿಷಭಪ್ರಿಯ	
	27. ಸರಸಾಂಗಿ	ರಿ$_2$ ಗ$_3$ ಧ$_1$ ನಿ$_3$	63. ಲತಾಂಗಿ	
	28. ಹರಿಕಾಂಭೋಜಿ	ರಿ$_2$ ಗ$_3$ ಧ$_2$ ನಿ$_2$	64. ವಾಚಸ್ಪತಿ	
	29. ಧೀರಶಂಕರಾಭರಣ	ರಿ$_2$ ಗ$_3$ ಧ$_2$ ನಿ$_3$	65. ಮೇಚಕಲ್ಯಾಣಿ	
	30. ನಾಗಾನಂದಿನಿ	ರಿ$_2$ ಗ$_3$ ಧ$_3$ ನಿ$_3$	66. ಚಿತ್ರಾಂಬರಿ	
ಚಕ್ರ ನಂ ೬	31. ಯಾಗಪ್ರಿಯ	ರಿ$_3$ ಗ$_3$ ಧ$_1$ ನಿ$_1$	67. ಸುಚರಿತ್ರ	ಚಕ್ರ ನಂ ೧೨
	32. ರಾಗವರ್ಧಿನಿ	ರಿ$_3$ ಗ$_3$ ಧ$_1$ ನಿ$_2$	68. ಜ್ಯೋತಿಸ್ವರೂಪಿಣಿ	
	33. ಗಾಂಗೇಯಭೂಷಣಿ	ರಿ$_3$ ಗ$_3$ ಧ$_1$ ನಿ$_3$	69. ಧಾತುವರ್ಧಿನಿ	
	34. ವಾಗಧೀಶ್ವರಿ	ರಿ$_3$ ಗ$_3$ ಧ$_2$ ನಿ$_2$	70. ನಾಸಿಕಾಭೂಷಣಿ	
	35. ಶೂಲಿನಿ	ರಿ$_3$ ಗ$_3$ ಧ$_2$ ನಿ$_3$	71. ಕೋಸಲ	
	36. ಚಲನಾಟ	ರಿ$_3$ ಗ$_3$ ಧ$_3$ ನಿ$_3$	72. ರಸಿಕಪ್ರಿಯ	

ಹಿಂದಿನ ಪಥಕದಲ್ಲಿ ಧೀರಶಂಕರಾಭರಣವು ಶುದ್ಧಮಧ್ಯಮ ರಾಗ. ಅದಕ್ಕೆ ಎದುರಿನಲ್ಲಿರುವ ಮೇಚಕಲ್ಯಾಣಿ ರಾಗವು ಪ್ರತಿಮಧ್ಯಮ ರಾಗ. ಇವೆರಡಕ್ಕೂ ಮಧ್ಯಮ ಒಂದು ಬಿಟ್ಟು ಉಳಿದ ಎಲ್ಲಾ ಸ್ವರಗಳೂ ಸಮಾನ ವಾದದ್ದು. ಆದುದರಿಂದ ಈ ರಾಗಗಳ ಸ್ವರಗಳು ಈ ಕೆಳಗೆ ಕಂಡಂತೆ ಇರುವುವು—

ಧೀರಶಂಕರಾಭರಣ—ಸ ರಿ$_2$ ಗ$_3$ ಮ$_1$ ಪ ಧ$_2$ ನಿ$_3$ ಸ

ಮೇಚಕಲ್ಯಾಣಿ— ಸ ರಿ$_2$ ಗ$_3$ ಮ$_2$ ಪ ಧ$_2$ ನಿ$_3$ ಸ

ಹೀಗೆಯೇ 1 ರಿಂದ 6ನೇ ಚಕ್ರದಲ್ಲಿರುವ ರಾಗಗಳಿಗೆ ಅವುಗಳ ಎದುರಿನಲ್ಲಿ ಬರೆದಿರುವ 7 ರಿಂದ 12ನೇ ಚಕ್ರದ ರಾಗಗಳು ಮಧ್ಯಮ ಒಂದರಲ್ಲಿ ವಿನಾ ಎಲ್ಲಾ ಸ್ವರಗಳಲ್ಲಿಯೂ ಸಮಾನವಾಗಿರುವುವು.

ಕೆಲವು ರಾಗಗಳ ಲಕ್ಷಣ

ಅಠಾಣ—ಆರೋಹಣ: ಸ ರಿ$_2$ ಮ$_1$ ಪ ಧ$_2$ ನಿ$_3$ ಸ |
ಅವರೋಹಣ: ಸ ನಿ ಧಾ ಪ ಮ ಪ ಗಾ$_3$ ಮ ರೀ ಸ ||

29ನೇ ಮೇಳ ಧೀರಶಂಕರಾಭರಣ ಜನ್ಯ. ದೇಶೀಯ, ಭಾಷಾಂಗ, ಷಾಡವ ವಕ್ರಸಂಪೂರ್ಣ, ಸಾರ್ವಕಾಲಿಕ, ಷಡ್ಜಗ್ರಹ, ಗಾಂಧಾರ, ಧೈವತ ಜೀವಸ್ವರಗಳು. ವೀರರಸಪ್ರಧಾನ. ವಾತರೋಗಹರ. 28ನೇ ಮೇಳ ಹರಿಕಾಂಭೋಜಿ ಜನ್ಯವೆಂದು ಕೆಲವರು ಹೇಳಿದ್ದಾರೆ. ಸಾಧಾರಣ ಗಾಂಧಾರವೂ, ಅಂತರ ಗಾಂಧಾರವೂ ಕೈಶಿಕಿ, ಕಾಕಲಿ ನಿಷಾದಗಳೂ ಪ್ರಯೋಗಗಳಲ್ಲಿ ಕಂಡುಬರುತ್ತವೆ.

ಆನಂದಭೈರವಿ—ಆರೋಹಣ: ಸ ಗ$_2$ ರಿ$_2$ ಗ ಮ ಪ ಧ ಪ ನಿ$_2$ ಸ |
ಅವರೋಹಣ: ಸ ನಿ ಧ ಪ ಮ ಗ ರಿ ಸ ||

20ನೇ ಮೇಳ ನಠಭೈರವಿ ಜನ್ಯ. ನಯರಾಗ, ಉಪಾಂಗ, ವಕ್ರ ಷಾಡವ ಸಂಪೂರ್ಣ, ಸಾರ್ವಕಾಲಿಕ, ಷಡ್ಜಗ್ರಹ, ಸಾಧಾರಣ ಗಾಂಧಾರ,

ಶುದ್ಧಮಧ್ಯಮ, ಕೈಶಿಕಿ ನಿಷಾದಗಳು ಜೀವಸ್ವರಗಳು. ಭಯಾನಕ, ಹಾಸ್ಯರಸಪ್ರಧಾನ, ಅನುನಾಸಿಕ ರೋಗಹರ. ಶುದ್ಧಧೈವತ, ಚತುಶ್ರುತಿ ಧೈವತಗಳೂ ಪ್ರಯೋಗದಲ್ಲಿವೆ. ಕಾಕಲಿ ನಿಷಾದ ಪ್ರಯೋಗವೂ ಇದೆ. ಇದು ಸರಿಯಲ್ಲವೆಂದು ಕೆಲವರ ಮತ. ಮಂದ್ರದಲ್ಲಿ ನಿಷಾದಾಂತ್ಯವಾದ ರಾಗ.

ಆರಭಿ— ಆರೋಹಣ: ಸ ರಿ ಮ ಪ ಧ ಸ̇ |
ಅವರೋಹಣ: ಸ̇ ನಿ$_3$ ಧ$_2$ ಪ ಮ$_1$ ಗ$_3$ ರಿ$_2$ ಸ ||

29ನೇ ಮೇಳ ಧೀರಶಂಕರಾಭರಣ ಜನ್ಯ. ಘನರಾಗ, ಉಪಾಂಗ, ಔಡವ ಸಂಪೂರ್ಣ, ಸಾರ್ವಕಾಲಿಕ, ಷಡ್ಜಗ್ರಹ, ಋಷಭ, ಧೈವತಗಳು ಜೀವಸ್ವರಗಳು. ವೀರರಸಪ್ರಧಾನ. ಜಂಟೀಸ್ವರ ಪ್ರಯೋಗಗಳು ಬಂದಲ್ಲಿ ರಾಗ ರಂಜನೆಯುಂಟು. ನಾಸಿಕಾರೋಗಹರ.

ಕನ್ನಡ— ಆರೋಹಣ: ಸ ಗಾ ಮ ಧ ನಿ$_3$ ಸ̇ |
ಅವರೋಹಣ: ಸ̇ ಧಾ$_2$ ಪ ಮ$_1$ ಗ$_3$ ಮ ರಿ$_2$ ಸ ||

29ನೇ ಮೇಳ ಧೀರಶಂಕರಾಭರಣ ಜನ್ಯ. ನಯರಾಗ, ಭಾಷಾಂಗ, ಔಡವ, ವಕ್ರಷಾಡವ, ಸಾರ್ವಕಾಲಿಕ, ಷಡ್ಜಗ್ರಹ, ಗಾಂಧಾರ, ಧೈವತಗಳು ಜೀವಸ್ವರಗಳು. ಕರುಣಾರಸಪ್ರಧಾನ. ಈ ರಾಗ ಹಾಡಲು ಬೊಜ್ಜು ಕರಗಿ ಕೃಶಾಂಗನಾಗುವನು. ಅಪರೂಪವಾಗಿ ಕೈಶಿಕಿನಿಷಾದ ಪ್ರಯೋಗವಿರುವುದು.

ಕಮಾಚು— ಆರೋಹಣ: ಸ ಮ ಗ ಮ ಪ ಧ ನಿ ಸ̇ |
ಅವರೋಹಣ: ಸ̇ ನಿ$_2$ ಧ$_2$ ಪ ಮ$_1$ ಗ$_3$ ರಿ$_2$ ಸ ||

28ನೇ ಮೇಳ ಹರಿಕಾಂಭೋಜಿ ಜನ್ಯ. ದೇಶೀಯ ರಾಗ, ನಯರಾಗ, ಭಾಷಾಂಗ, ವಕ್ರಷಾಡವ ಸಂಪೂರ್ಣ, ಸಾರ್ವಕಾಲಿಕ, ಷಡ್ಜಗ್ರಹ, ಮಧ್ಯಮ, ಧೈವತಗಳು ಜೀವಸ್ವರಗಳು. ಹಾಸ್ಯರಸಪ್ರಧಾನ. ಬುದ್ಧಿ ಪ್ರವರ್ತಕ ರಾಗ. ಪೂರ್ವೀಕರು ಮಂದ್ರನಿಷಾದಕ್ಕಿಂತ ಕೆಳಗೆ ಪ್ರಯೋಗಿಸಿಲ್ಲ. ಔತ್ತರೇಯರಿಂದ ಕೆಲವು ವರ್ಣಗಳ ಕೆಳಗೆ ಇಲ್ಲಿಗೆ ಬಂದಂತೆ ತಿಳಿದಿದೆ. ಕಾಕಲಿ ನಿಷಾದ ಪ್ರಯೋಗವು ವಿನೋದಕರ.

ಕಲ್ಯಾಣಿ— ಆರೋಹಣ: ಸ ರಿ₂ ಗ₃ ಮ₂ ಪ ಧ₂ ನಿ₃ ಸ |
ಅವರೋಹಣ: ಸ ನಿ ಧ ಪ ಮ ಗ ರಿ ಸ ||

65ನೇ ಮೇಳ (ಮೇಚ)ಕಲ್ಯಾಣಿಜನಕ ರಾಗ. ನಯರಾಗ, ರಾಗಾಂಗ ಸಂಪೂರ್ಣ, ಸಾರ್ವಕಾಲಿಕ ರಾಗ. ಆದರೂ ಮಧ್ಯಾಹ್ನ 12 ರಿಂದ 3 ಗಂಟೆ ವರೆಗೆ ಹಾಡಬೇಕಾದದ್ದು. ಷಡ್ಜಗ್ರಹ, ಋಷಭ, ಗಾಂಧಾರಗಳು ಜೀವಸ್ವ ಗಳು. ವೀರ-ಕರುಣಾರಸಪ್ರಧಾನ. ಪಿತ್ಥಶಾಂತಿ. ದಾಟುಸ್ವರ ಪ್ರಯೋ ವಿದೆ. ಪಂಚಮವನ್ನು ವರ್ಜ್ಯಮಾಡಿ ಹಾಡಲು ರಂಜನೆಯುಂಟು.

ಕಾನಡ— ಆರೋಹಣ: ಗ ರಿ ಸ ರಿ₂ ಗ₂ ಮ₁ ಪ ಮ ಧಾ₂ ನಿ₂ ಸ
ಅವರೋಹಣ: ಸ ನಿ ಸ ಧ ಪ ಮ ಗ ಮ ರಿ ಸ ||

22ನೇ ಮೇಳ ಖರಹರಪ್ರಿಯ ಜನ್ಯ. ದೇಶೀಯರಾಗ, ಭಾಷಾಂಗ ವಕ್ರಸಂಪೂರ್ಣ, ಸಾರ್ವಕಾಲಿಕ, ಷಡ್ಜಗ್ರಹ, ಸಾಧಾರಣ ಗಾಂಧಾರ, ಚತ ಶ್ರುತಿ ಧೈವತಗಳು ಜೀವಸ್ವರಗಳು. ಕರುಣಾರಸಪ್ರಧಾನ. ವಾತರೋಗಹರ ಕೆಲವು ಕಡೆ ಅಂತರ ಗಾಂಧಾರವೂ ಕಾಕಲಿ ನಿಷಾದವೂ ಬರುವುದರಿಂದ 28ನೆ ಮೇಳ ಹರಿಕಾಂಭೋಜಿ ಜನ್ಯವೆಂದು ಕೆಲವರ ಮತ. ಒಂದೇ ಮಾರ್ಗ ನ್ನನುಸರಿಸದ ರಾಗ, ಅನುಭವವೇದ್ಯವಾದದ್ದು.

ಕಾಂಭೋಜಿ—ಆರೋಹಣ: ಸ ರಿ₂ ಗ₃ ಮ₁ ಪ ಧ₂ ಸ |
ಅವರೋಹಣ: ಸ ನಿ₂ ಧ ಪ ಮ ಗ ರಿ ಸ, ನಿ₃ ಪ ಧ ಸ

28ನೇ ಮೇಳ ಹರಿಕಾಂಭೋಜಿ ಜನ್ಯ. ನಯರಾಗ, ಭಾಷಾಂಗ ಷಾಡವ ಸಂಪೂರ್ಣ, ಸಾರ್ವಕಾಲಿಕ ಆದರೂ ಸಾಯಂಕಾಲ 6 ರಿಂದ ರಾತ್ರಿ 9 ಗಂಟೆ ವರೆಗೆ ಹಾಡತಕ್ಕದ್ದು. ಷಡ್ಜಗ್ರಹ, ಶುದ್ಧಮಧ್ಯಮ, ಚತುಶ್ರು ಧೈವತಗಳು ಆರೋಹಣದಲ್ಲಿಯೂ, ಕೈಶಿಕಿ ಕಾಕಲಿ ನಿಷಾದಗಳು ಅವರೋ ಹಣದಲ್ಲಿಯೂ ಜೀವಸ್ವರಗಳು. ಭಯಾನಕ ರಸಪ್ರಧಾನ. ಉದರರೋ ಹರ. ಸನಿಪಧಸ - ಇಲ್ಲಿ ಕಾಕಲಿ ನಿಷಾದ ಪ್ರಯೋಗ.

ಕಾಮವರ್ಧಿನಿ— ಆರೋಹಣ: ಸ ರಿ ಗ ಮ ಪ ಧ ನಿ ಸೆ |
ಅವರೋಹಣ: ಸೆ ನಿ ಧ ಪ ಮ ಗ ರಿ ಸ ||

51ನೇ ಮೇಳಜನಕ ರಾಗ, ರಾಗಾಂಗ, ಸಂಪೂರ್ಣ. ಮಧ್ಯಾಹ್ನ 12 ರಿಂದ 3 ಗಂಟೆವರೆಗೆ ಹಾಡತಕ್ಕದ್ದು. ಷಡ್ಜಗ್ರಹ ಸರ್ವಸ್ವರ ಜೀವಸ್ವರಗಳು. ನವರಸಪ್ರಧಾನ. ಸರ್ವರೋಗಹರ.

ಕೇದಾರ— ಆರೋಹಣ: ಸ $ಮ_1$ $ಗ_3$ ಮ ಪ $ನಿ_3$ ಸೆ |
ಅವರೋಹಣ: ಸೆ ನಿ ಪ ಮ ಗ $ರಿ_2$ ಸ ||

29ನೇ ಮೇಳ, ಧೀರಶಂಕರಾಭರಣ ಜನ್ಯ. ಘನರಾಗ, ಉಪಾಂಗ, ವಕ್ರ ಔಡವ ಷಾಡವ, ಸಾರ್ವಕಾಲಿಕ. ರಾತ್ರಿ 9 ರಿಂದ 12ರ ವರೆಗೆ ಹಾಡಬೇಕು. ನಿಷಾದ, ಮಧ್ಯಮಗಳು ಜೀವಸ್ವರಗಳು. ಭಯಾನಕ ರಸಪ್ರಧಾನ. ಮನೋರೋಗಹರ. ಕೆಲವು ವೇಳೆ ಕೈಶಿಕಿ ನುಡಿಯುವುದರಿಂದ ಭಾಷಾಂಗವೆನ್ನುವರು.

ಕೇದಾರಗೌಳ— ಆರೋಹಣ: ಸ $ರಿ_2$ $ಮ_1$ ಪ $ನಿ_2$ ಸೆ |
ಅವರೋಹಣ: ಸೆ ನಿ $ಧ_2$ ಪ ಮ $ಗ_3$ ರಿ ಸ ||

28ನೇ ಮೇಳ ಹರಿಕಾಂಭೋಜಿ ಜನ್ಯ. ನಯರಾಗ, ಉಪಾಂಗ, ಔಡವ ಸಂಪೂರ್ಣ. ಸಾಯಂಕಾಲ 6 ರಿಂದ 9 ಗಂಟೆ ವರೆಗೆ ಹಾಡತಕ್ಕದ್ದು. ನಿಷಾದಗ್ರಹ, ಚತುಶ್ರುತಿ ಋಷಭ, ಅಂತರಗಾಂಧಾರ, ಶುದ್ಧಮಧ್ಯಮ, ಕೈಶಿಕಿ ನಿಷಾದ ಜೀವಸ್ವರಗಳು. ಕರುಣಾಹಾಸ್ಯರಸಪ್ರಧಾನ. ಕಂಠರೋಗಹರ. ರಿಗರಿಸ-ಪ್ರಯೋಗರಂಜನೆಯುಂಟು.

ಖರಹರಪ್ರಿಯ—ಆರೋಹಣ: ಸ $ರಿ_2$ $ಗ_2$ $ಮ_1$ ಪ $ಧ_2$ $ನಿ_2$ ಸ |
ಅವರೋಹಣ: ಸೆ ನಿ ಧ ಪ ಮ ಗ ರಿ ಸ ||

22ನೇ ಮೇಳಜನಕ ರಾಗ. ನಯರಾಗ, ರಾಗಾಂಗ, ಸಂಪೂರ್ಣ, ಸಾರ್ವಕಾಲಿಕ. ಆದರೂ ಬೆಳಿಗ್ಗೆ 9 ರಿಂದ 12ರ ವರೆಗೂ ಸಾಯಂಕಾಲ

6 ರಿಂದ 9ರ ವರೆಗೂ ಹಾಡಲು ರಂಜನೆಯುಂಟು. ಷಡ್ಜಗ್ರಹ, ಸಾಧಾರಣ ಗಾಂಧಾರ, ಚತುಶ್ರುತಿ ಧೈವತ, ಕೈಶಿಕಿ ನಿಷಾದ, ಶುದ್ಧಮಧ್ಯಮ ಜೀವ ಸ್ವರಗಳು. ನವರಸಪ್ರಧಾನ. ಸರ್ವರೋಗಹರ. ಸರ್ವಸ್ವರ ಗಮಕರಾಗ.

ಚಕ್ರವಾಕ— ಆರೋಹಣ: ಸ ರಿ$_1$ ಗ$_3$ ಮ$_1$ ಪ ಧ$_2$ ನಿ$_2$ ಸ |
ಅವರೋಹಣ: ಸ ನಿ ಧ ಪ ಮ ಗ ರಿ ಸ ||

16ನೇ ಮೇಳಜನಕ ರಾಗ. ನಯರಾಗ, ರಾಗಾಂಗ, ಸಂಪೂರ್ಣ, ಸಾರ್ವಕಾಲಿಕ, ಷಡ್ಜಗ್ರಹ, ಶುದ್ಧಋಷಭ, ಕೈಶಿಕಿ ನಿಷಾದಗಳು ಜೀವಸ್ವರಗಳು. ಭಯಾನಕರಸ. ಅಂತರಂಗ ರೋಗಹರ. ಸರ್ವಸ್ವರ ಗಮಕರಾಗ.

ಜುಂಝೂಟಿ— ಆರೋಹಣ: ಧ̣ ಸ ರಿ ಗಾ ಮ ಪ ಧ ನೀ |
ಅವರೋಹಣ: ಧ ಪ ಮ ಗ ರಿ ಸ ನ̣ಿ ಧ̣ ಪ̣ ಧ̣ ಸ ||

28ನೇ ಮೇಳ ಹರಿಕಾಂಭೋಜಿ ಜನ್ಯ. ದೇಶೀಯ ನಯರಾಗ. ಉಪಾಂಗ, ಸಂಪೂರ್ಣ, ಸಾರ್ವಕಾಲಿಕ, ಷಡ್ಜಗ್ರಹ, ಶುದ್ಧಮಧ್ಯಮ, ಚತುಶ್ರುತಿ ಧೈವತ ಜೀವಸ್ವರಗಳು. ಶಾಂತಿರಸಪ್ರಧಾನ, ಮನೋಲ್ಲಾಸಕರ. ಮಧ್ಯರಾಗ. ಮಂದ್ರಸ್ಥಾಯಿ. ನಿಷಾದ ವರ್ಜ್ಯ.

ತೋಡಿ— ಆರೋಹಣ: ಸ ರಿ$_1$ ಗ$_2$ ಮ$_1$ ಪ ಧ$_1$ ನಿ$_2$ ಸ |
ಅವರೋಹಣ: ಸ ನಿ ಧ ಪ ಮ ಗ ರಿ ಸ ||

8ನೇ ಮೇಳ (ಹನುಮ) ತೋಡಿ ಜನಕರಾಗ, ಶುದ್ಧ ಕರ್ಣಾಟಕ ರಾಗ. ಆದರೂ ಔತ್ತರೇಯ. ನಯರಾಗ, ರಾಗಾಂಗ, ಸಂಪೂರ್ಣ ಸಾರ್ವಕಾಲಿಕ. ಆದರೂ ಮಧ್ಯಾಹ್ನಾತ್ಪರ 3 ರಿಂದ 6ರವರೆಗೆ ಹಾಡಬೇಕಾದದ್ದು. ಷಡ್ಜ ಗ್ರಹ, ಸಾಧಾರಣ ಗಾಂಧಾರ, ಶುದ್ಧ ಮಧ್ಯಮ, ಶುದ್ಧ ಧೈವತ ಜೀವ ಸ್ವರಗಳು. ಶೋಕರಸ ಪ್ರಧಾನ, ನೇತ್ರರೋಗಹರ. ಪಂಚಮ ವರ್ಜ್ಯ ಮಾಡಿ ಹಾಡುವುದು ವಾಡಿಕೆ. ರಂಜನೆಯಾಗಿರುವುದು.

ದರ್ಬಾರು— ಆರೋಹಣ: ಸ ರಿ$_2$ ಮ$_1$ ಪ ಧ$_2$ ನಿ$_2$ ಸ |
ಅವರೋಹಣ: ಸ ನಿ ಧ ಪ ಮ ರಿ ಗಾ$_2$ ರಿ ಸ ||

22ನೇ ಮೇಳ ಖರಹರಪ್ರಿಯ ಜನ್ಯ. ದೇಶೀಯ, ನಯರಾಗ, ಭಾಷಾಂಗ, ಷಾಡವ ವಕ್ರಸಂಪೂರ್ಣ, ಸಾರ್ವಕಾಲಿಕ, ಷಡ್ಜಗ್ರಹ, ಸಾಧಾರಣ ಗಾಂಧಾರ, ಕೈಶಿಕಿ ನಿಷಾದಗಳು ಜೀವಸ್ವರಗಳು. ಕರುಣಾರಸ ಪ್ರಧಾನ. ಹೃದ್ರೋಗಹರ. ಗಗರಿಸ, ನಿನಿಧಪ, ಗಗ್ಗಾರಿಸ—ಹೀಗೆಲ್ಲಾ ಪ್ರಯೋಗಗಳುಂಟು. ಗಮಕಶುದ್ಧ ರಾಗ.

ದೇವಗಾಂಧಾರಿ—ಆರೋಹಣ: ಸರಿ$_2$ಗ$_3$ಮ$_1$ಗರಿಮಪಧಾ$_2$ನಿ$_3$ಸ |
ಅವರೋಹಣ: ಸನಿಧಾಪಮಗರೀಸ ||

29ನೇ ಮೇಳ ಧೀರಶಂಕರಾಭರಣ ಜನ್ಯ. ದೇಶೀಯ, ರಕ್ತಿರಾಗ, ಭಾಷಾಂಗ, ವಕ್ರಸಂಪೂರ್ಣ, ಸಾರ್ವಕಾಲಿಕ ಆದರೂ ಉದಯಾತ್ಪೂರ್ವ 3 ರಿಂದ 6ರ ವರೆಗೆ ಹಾಡತಕ್ಕದ್ದು. ಷಡ್ಜಗ್ರಹ, ಚತುಶ್ರುತಿ ಋಷಭ, ಚತುಶ್ರುತಿ ಧೈವತಗಳು ಜೀವಸ್ವರಗಳು. ಭೀಭತ್ಸ ಶಾಂತಿರಸಪ್ರಧಾನ. ಶ್ವಾಸಕೋಶ ರೋಗಹರ. ಕೆಲವು ಕಡೆ ಕೈಶಿಕಿ ನಿಷಾದವೂ ನುಡಿಯುವುದು.

ಧನ್ಯಾಸಿ— ಆರೋಹಣ: ಸ ಗಾ$_2$ ಮ$_1$ ಪ ನೀ$_2$ ಸ |
ಅವರೋಹಣ: ಸ ನಿ ಧ$_1$ ಪ ಮ ಗ ರಿ$_1$ ಸ ||

8ನೇ ಮೇಳ ಹನುಮತೋಡಿ ಜನ್ಯ. ರಕ್ತಿರಾಗ, ಭಾಷಾಂಗ, ಔಡವ ಸಂಪೂರ್ಣ. ಮೊದಲಝಾವ (ಬೆಳಗಿನ) 3 ರಿಂದ 6ರ ವರೆಗೆ ಹಾಡತಕ್ಕದ್ದು. ಷಡ್ಜಗ್ರಹ, ಸಾಧಾರಣ ಗಾಂಧಾರ, ಕೈಶಿಕಿ ನಿಷಾದ ಜೀವಸ್ವರಗಳು. ಕರುಣಾ ಶಾಂತಿರಸಪ್ರಧಾನ. ಶಿರೋರೋಗಹರ. ಗರಿಗಾ ಎನ್ನುವಲ್ಲಿ ಋಷಭವು ಹೆಚ್ಚು ನುಡಿಯುವುದು. ಇಲ್ಲವಾದಲ್ಲಿ ಇದು ಉಪಾಂಗ.

ನಾಟ—ಆರೋಹಣ: ಸ ಗ$_3$ ಮ$_1$ ಪ ನಿ$_3$ ಸ |
ಅವರೋಹಣ: ಸ ನಿ ಪ ಮ ರಿ$_3$ ಸ ||

36ನೇ ಮೇಳ ಚಲನಾಟ ಜನ್ಯ. ಘನರಾಗ, ಉಪಾಂಗ, ಔಡವ. ಸಾಯಂಕಾಲ 6 ರಿಂದ 9ರ ವರೆಗೆ ಹಾಡತಕ್ಕದ್ದು. ಷಡ್ಜಗ್ರಹ, ಷಟ್ಛೃತಿ ಋಷಭ, ಶುದ್ಧಮಧ್ಯಮ ಜೀವಸ್ವರಗಳು. ವೀರರಸಪ್ರಧಾನ. ಹೃದ್ರೋಗಹರ.

ನಾಯಕಿ— ಆರೋಹಣ: ಸ ರಿ$_3$ ಗ$_3$ ಮ$_1$ ಪ ಧ$_3$ ಪ ಸ̇ |
ಅವರೋಹಣ: ಸ̇ ನಿ$_3$ ಧ ಪ ಮ ರಿ ಗಾ ರಿ ಸ ||

22ನೇ ಮೇಳ ಖರಹರಪ್ರಿಯ ಜನ್ಯ. ದೇಶೀಯ ಸಾಧಾರಣ, ಭಾಷಾಂಗ, ವಕ್ರಷಾಡವ ವಕ್ರಸಂಪೂರ್ಣ. ಸಾರ್ವಕಾಲಿಕ, ಷಡ್ಜಗ್ರಹ, ಸಾಧಾರಣ ಗಾಂಧಾರ, ಕೈಶಿಕಿ ನಿಷಾದಗಳು ಜೀವಸ್ವರಗಳು. ದಯಾರಸ, ಮೆದುಳುರೋಗಹರ. ಶುದ್ಧಧೈವತ ಪ್ರಯೋಗದಿಂದ 20ನೇ ಮೇಳ ನಠಭೈರವಿ ಜನ್ಯವೆಂದೂ ಕೆಲವರ ಮತ.

ನಾರಾಯಣಗೌಳ— ಆರೋಹಣ: ಸ ರಿ$_2$ ಮ$_1$ ಪ ನಿ$_2$ ಧ$_2$ ನಿ ಸ̇ |
ಅವರೋಹಣ: ನಿ ಧ ಪ ಮ ಗ ರಿ ಗ$_3$ ರಿ ಸ ||

28ನೇ ಮೇಳ ಹರಿಕಾಂಭೋಜಿ ಜನ್ಯ. ಘನರಾಗ, ಉಪಾಂಗ, ವಕ್ರಷಾಡವ ರಾಗ. ಸಾರ್ವಕಾಲಿಕ, ನಿಷಾದಗ್ರಹ, ಚತುಶ್ರುತಿ ಋಷಭ, ಕೈಶಿಕಿ ನಿಷಾದಗಳು ಜೀವಸ್ವರಗಳು. ವೀರರಸಪ್ರಧಾನ. ಶಾಂತಿಪ್ರದ.

ಪುನ್ನಾಗವರಾಳಿ—ಆರೋಹಣ: ನಿ̣$_2$ ಸ ರಿ$_1$ ಗ$_2$ ಮ$_1$ ಪ ಧ$_1$ ನೀ |
ಅವರೋಹಣ: ನಿ ಧ ಪ ಮ ಗ ರಿ ಸ ನೀ̣ ||

8ನೇ ಮೇಳ ಹನುಮತೋಡಿ ಜನ್ಯ. ರಕ್ತಿರಾಗ (ನಯರಾಗ), ಭಾಷಾಂಗ, ಸಂಪೂರ್ಣ, ಸಾರ್ವಕಾಲಿಕ. ರಾತ್ರಿ ಕಾಲದಲ್ಲಿ ಹಾಡಬೇಕೆಂದು ಕೆಲವರ ಮತ. ಷಡ್ಜಗ್ರಹ, ದೀರ್ಘವಾದ ಸಾಧಾರಣ ಗಾಂಧಾರ. ಶುದ್ಧ ಮಧ್ಯಮ, ಕೈಶಿಕಿ ನಿಷಾದಗಳು ಜೀವಸ್ವರಗಳು. ಹಾಸ್ಯರಸಪ್ರಧಾನ. ಚರ್ಮರೋಗಹರ. ನಿಷಾದಾಂತ್ಯರಾಗ. ಮಂದ್ರನಿಷಾದದಿಂದ ಪ್ರಾರಂಭ. ಗರಿಗಾ ಎನ್ನುವಲ್ಲಿ ಚತುಶ್ರುತಿ ಋಷಭವು ನುಡಿಯುವುದು. ಮಧ್ಯರಾಗ.

ಪೂರ್ವಿಕಲ್ಯಾಣಿ—ಆರೋಹಣ: ಸರಿ$_1$ಗ$_3$ಮ$_2$ಪಧ$_2$ನಿ$_3$ಪಧಪಸ |
ಅವರೋಹಣ: ಸನಿಧಪಮಗರಿಸ ||

53ನೇ ಮೇಳ ಗಮನಶ್ರಮ ಜನ್ಯ. ಉಪಾಂಗ, ವಕ್ರಸಂಪೂರ್ಣ, ಸಂಪೂರ್ಣ ಸಾಧಾರಣ ರಾಗ. ಸಾರ್ವಕಾಲಿಕ, ಷಡ್ಜಗ್ರಹ, ಪಂಚಮ, ಚತುಶ್ರುತಿ ಧೈವತ ಜೀವಸ್ವರಗಳು. ಶೃಂಗಾರರಸಪ್ರಧಾನ. ಕಟಿರೋಗಹರ. ಮಪಧಪ, ಧನಿಧಪ, ಪಧನಿಪ, ಧಪಸ—ಇವುಗಳು ಮುಖ್ಯ ಸಂಚಾರಗಳು.

ಬಿಲಹರಿ— ಆರೋಹಣ: ಸ ರಿ ಗ ಪ ಧ ಸ |
ಅವರೋಹಣ: ಸ ನಿ$_3$ ಧ$_2$ ಪ ಮ$_1$ ಗ$_3$ ರಿ$_2$ ಸ ||

29ನೇ ಮೇಳ ಧೀರಶಂಕರಾಭರಣ ಜನ್ಯ. ದೇಶೀಯ, ನಯರಾಗ, ಭಾಷಾಂಗ, ಔಡವ ಸಂಪೂರ್ಣ, ಷಡ್ಜಗ್ರಹ, ಅಂತರಗಾಂಧಾರ, ಪಂಚಮ, ಚತುಶ್ರುತಿ ಧೈವತ ಜೀವಸ್ವರಗಳು. ಶೃಂಗಾರ ಕರುಣಾರಸಗಳು ಪ್ರಧಾನ. ಚಿತ್ತಶುದ್ಧಿ. ಸಾರ್ವಕಾಲಿಕ. ಆದರೂ ಪ್ರಾತಃಕಾಲ 6 ರಿಂದ 9ರ ವರೆಗೆ ಹಾಡತಕ್ಕದ್ದು. ಕೆಲವು ವೇಳೆ ಕೈಶಿಕಿ ನಿಷಾದವೂ ನುಡಿಯುವುದು.

ಬೇಗಡೆ— ಆರೋಹಣ: ಸ ಗ$_3$ ರಿ$_2$ ಗ ಮ$_1$ ಪ ಧ$_2$ ನೀ$_3$ ಧ ಪ ಸ |
ಅವರೋಹಣ: ಸ ನೀ ಧ ಪ ಮಾ ಗ ರಿ ಸ ||

29ನೇ ಮೇಳ ಧೀರಶಂಕರಾಭರಣ ಜನ್ಯ. ರಕ್ತಿರಾಗ, ಭಾಷಾಂಗ, ವಕ್ರಸಂಪೂರ್ಣ. ಸಾರ್ವಕಾಲಿಕ ಆದರೂ ಸಾಯಂಕಾಲ 6 ರಿಂದ 9ರ ವರೆಗೆ ಹಾಡತಕ್ಕದ್ದು. ಷಡ್ಜಗ್ರಹ, ಶುದ್ಧಮಧ್ಯಮ, ಕಾಕಲಿ ನಿಷಾದ ಜೀವಸ್ವರಗಳು. ಹೃದಯಶಕ್ತಿವರ್ಧಕ. ಕೈಶಿಕಿ ನಿಷಾದ ಪ್ರಯೋಗವಿದೆ.

ಭೈರವಿ—ಆರೋಹಣ: ಸ ರಿ$_2$ ಗ$_2$ ಮ$_1$ ಪ ಧ$_2$ ನಿ$_2$ ಸ |
ಅವರೋಹಣ: ಸ ನಿ ಧ$_1$ ಪ ಮ ಗ ರಿ ಸ ||

20ನೇ ಮೇಳ ನಠಭೈರವಿ ಜನ್ಯ. ದೇಶೀಯ, ನಯರಾಗ, ಭಾಷಾಂಗ, ಸಂಪೂರ್ಣ. ಬೆಳಗ್ಗೆ 6 ರಿಂದ 9, ಸಾಯಂಕಾಲ 6 ರಿಂದ 9ರ ವರೆಗೆ

ಹಾಡತಕ್ಕದ್ದು. ನಿಷಾದಗ್ರಹ, ಸರ್ವಸ್ವರ ಜೀವಸ್ವರ. ನವರಸಪ್ರಧಾನ. ಸರ್ವರೋಗಹರ. ಎಲ್ಲಾ ವಿಧವಾದ ಸಂಚಾರಗಳೂ ಉಂಟು.

ಮಧ್ಯಮಾವತಿ— ಆರೋಹಣ: ಸ ರಿ ಮ ಪ ನಿ ಸ |
ಅವರೋಹಣ: ಸ ನಿ ಪ ಮ ರಿ ಸ ||

22ನೇ ಮೇಳ ಖರಹರಪ್ರಿಯ ಜನ್ಯ. ನಯರಾಗ. ಭಾಷಾಂಗ. ಔಡವ, ಸಾರ್ವಕಾಲಿಕ. ಆದರೂ ಬೆಳಿಗ್ಗೆ 9 ರಿಂದ 12, ಸಂಜೆ 6 ರಿಂದ 9ರ ವರೆಗೆ ಹಾಡತಕ್ಕದ್ದು. ಮಧ್ಯಮಗ್ರಹ, ಚತುಶ್ರುತಿ ಋಷಭ, ಶುದ್ಧ ಮಧ್ಯಮ, ಕೈಶಿಕಿ ನಿಷಾದ ಜೀವಸ್ವರಗಳು. ನವರಸಪ್ರಧಾನ. ಸಕಲರೋಗಹರ. ಅಕಾಲದಲ್ಲಿ ಹಾಡಿದ ರಾಗದೋಷಗಳನ್ನು ಕಡೆಯಲ್ಲಿ ಹಾಡಿದ ಈ ರಾಗದಿಂದ ನಿವಾರಿಸಿಕೊಳ್ಳಬಹುದು. ಮಂಗಳಪ್ರದವಾದ ರಾಗ.

ಮಾಯಾಮಾಳವಗೌಳ—ಆರೋಹಣ: ಸರಿ$_1$ಗ$_3$ಮ$_1$ಪಧ$_1$ನಿ$_3$ಸ |
ಅವರೋಹಣ: ಸನಿಧಪಮಗರಿಸ ||

15ನೇ ಮೇಳಕರ್ತ ರಾಗ. ರಾಗಾಂಗ (ಜನಕ) ನಯರಾಗ, ಸಂಪೂರ್ಣ, ಸಾರ್ವಕಾಲಿಕ, ಷಡ್ಜಗ್ರಹ, ಸರ್ವಸ್ವರ ಜೀವಸ್ವರ. ನವರಸಪ್ರಧಾನ. ಸರ್ವರೋಗಹರ. ಸಕಲ ಶುಭಪ್ರದ ರಾಗ. 'ಸ' ಕ್ಕೆ 'ರಿ', 'ಗ' ಕ್ಕೆ 'ಮ', 'ಪ' ಕ್ಕೆ 'ಧ', 'ನಿ' ಕ್ಕೆ 'ಸ' ಸಮೀಪದಲ್ಲಿರುವ ಕಾರಣ ಸಂಗೀತಾಭ್ಯಾಸಕ್ಕೆ ಸುಲಭವೆಂದು ಪೂರ್ವಾಚಾರ್ಯರುಗಳು ಈ ರಾಗದಿಂದಲೇ ಸರಳಿ, ಜಂಟಿ, ಅಲಂಕಾರಾದಿಗಳನ್ನು ಹೇಳಿದ್ದಾರೆ. ಪಾಶ್ಚಿಮಾತ್ಯರು ಶಂಕರಾಭರಣದಿಂದ ಸಂಗೀತವನ್ನು ಆರಂಭಿಸುತ್ತಾರೆ.

ಮುಖಾರಿ— ಆರೋಹಣ: ಸ ರಿ$_2$ ಮ$_1$ ಪ ನಿ$_2$ ಧ$_2$ ಸ |
ಅವರೋಹಣ: ಸ ನಿ ಧ ಪ ಮ ಗ$_2$ ರಿ ಸ ||

22ನೇ ಮೇಳ ಖರಹರಪ್ರಿಯ ಜನ್ಯ. ನಯರಾಗ, ಭಾಷಾಂಗ, ವಕ್ರ ಷಾಡವ ಸಂಪೂರ್ಣ, ಸಾರ್ವಕಾಲಿಕ ಆದರೂ ಬೆಳಗ್ಗೆ 6 ರಿಂದ 9ರ ವರೆಗೆ

ಹಾಡತಕ್ಕದ್ದು. ಷಡ್ಜಗ್ರಹ, ಚತುಶ್ರುತಿ ಋಷಭ, ಶುದ್ಧಮಧ್ಯಮ, ಕೈಶಿಕಿ ನಿಷಾದಗಳು ಜೀವಸ್ವರಗಳು. ಸರ್ವರಸಪ್ರಧಾನವಾದರೂ ಶೋಕರಸ ಮುಖ್ಯ. ಚಿತ್ತರೋಗಹರ. ಆರೋಹಣದಲ್ಲಿ ಚತುಶ್ರುತಿ ಧೈವತವೂ ಅವರೋಹಣ ದಲ್ಲಿ ಶುದ್ಧಧೈವತವೂ ಬರುವುದರಿಂದ 20ನೇ ಮೇಳ ನಠಭೈರವಿ ಜನ್ಯವೆಂದು ಹೇಳುವರು. ಮತ್ತು ಧೈವತಗಳನ್ನೂ ಜೀವಸ್ವರಗಳೆಂದು ಹೇಳುವರು. ರಿಗರಿಮಾಗರಿ, ಸರಿಮಗರಿಸ, ರಿಮಪಸೇಧ, ಮಪಧಸಾ, ಸರಿಮಗಾರಿ— ಹೀಗೆಲ್ಲಾ ಪ್ರಯೋಗಗಳುಂಟು.

ಮೋಹನ— ಆರೋಹಣ: ಸ ರಿ₂ ಗ₃ ಪ ಧ₂ ಸ |

ಅವರೋಹಣ: ಸ ಧ ಪ ಗ ರಿ ಸ ||

28ನೇ ಮೇಳ ಹರಿಕಾಂಭೋಜಿ ಜನ್ಯ. ನಯರಾಗ, ಉಪಾಂಗವೆಂದು ಹೇಳಲ್ಪಟ್ಟರೂ ಭಾಷಾಂಗ ರಾಗ, ಔಡವ ರಾಗ, ಸಾರ್ವಕಾಲಿಕ ಆದರೂ ಮಧ್ಯಾಹ್ನ 12 ರಿಂದ 3ರ ವರೆಗೆ ಹಾಡತಕ್ಕದ್ದು. ಚತುಶ್ರುತಿ ಋಷಭ, ಅಂತರ ಗಾಂಧಾರ, ಚತುಶ್ರುತಿ ಧೈವತಗಳು ಜೀವಸ್ವರಗಳು. ಷಡ್ಜಗ್ರಹ, ನವರಸಪ್ರಧಾನವಾದರೂ ವೀರ, ಕರುಣರಸಗಳು ಎದ್ದುಕಾಣುತ್ತವೆ. ಸರ್ವ ರೋಗಹರ. ಗಾಂಧಾರಸ್ವರದ ಆಧಾರದಿಂದ ಚ್ಯುತಮಧ್ಯಮ ಸ್ವರವೂ, ಧೈವತ ಸ್ವರಾಶ್ರಯದಿಂದ ಕೈಶಿಕಿ ನಿಷಾದ ಸ್ವರವೂ ಕೆಲವು ಸಮಯಗಳಲ್ಲಿ ಕಂಡುಬರುವುದರಿಂದ ಈ ಅಲ್ಪಧ್ವನಿ ಸಂಯೋಗಕಾರಣ ಭಾಷಾಂಗವೆನಿಸಿ ಕೊಂಡಿದೆ. ಮಂಗಳಪ್ರದವಾದ ರಾಗ.

ಯದುಕುಲಕಾಂಭೋಜಿ— ಆರೋಹಣ: ಸ ರಿ₂ ಮ₁ ಪ ಧ₂ ಸ |

ಅವರೋಹಣ: ಸ ನಿ₂ ಧ ಪ ಮ ಗ₃ ರಿ ಸ ||

28ನೇ ಮೇಳ ಹರಿಕಾಂಭೋಜಿ ಜನ್ಯ. ನಯರಾಗ, ಭಾಷಾಂಗ, ಔಡವ ಸಂಪೂರ್ಣ, ಸಾರ್ವಕಾಲಿಕ, ಷಡ್ಜಗ್ರಹ, ಅಂತರ ಗಾಂಧಾರ, ಶುದ್ಧ ಮಧ್ಯಮ, ಚತುಶ್ರುತಿ ಧೈವತಗಳು ಜೀವಸ್ವರಗಳು. ನವರಸಪ್ರಧಾನ, ಸರ್ವರೋಗಹರ.

ರೀತಿಗೌಳ—ಆರೋಹಣ: ಸ $ರಿ_2$ $ಗ_2$ $ಮ_1$ $ನಿ_2$ $ಧ_1$ ಪ ನಿ ನಿ ಸಾ |
ಅವರೋಹಣ: ಸಾ ನಿ ನೀ ಧ ಮಾ ಗ ಗ ರಿ ಸ ||

20ನೇ ಮೇಳ ನಠಭೈರವಿ ಜನ್ಯ. ಘನರಾಗ, ಉಪಾಂಗ, ವಕ್ರ ಸಂಪೂರ್ಣ, ವಕ್ರಷಾಡವ ರಾಗ. ಸಾಯಂಕಾಲ ಹಾಡತಕ್ಕದ್ದು. ನಿಷಾ ಗ್ರಹ, ಕೈಶಿಕಿ ನಿಷಾದ, ಷಡ್ಜ, ಚತುಶ್ರುತಿ ಋಷಭ, ಸಾಧಾರಣ ಗಾಂಧಾರ ಶುದ್ಧಮಧ್ಯಮ ಜೀವಸ್ವರಗಳು. ರೌದ್ರ, ಕರುಣಾರಸಪ್ರಧಾನ. ಸರ್ವ ರೋಗಹರ.

ವಸಂತ— ಆರೋಹಣ: ಸ $ಗ_3$ $ಮ_1$ $ಧ_1$ $ನಿ_3$ ಸ |
ಅವರೋಹಣ: ಸ ನಿ ಧ ಮ ಗ $ರಿ_1$ ಸ ||

15ನೇ ಮೇಳ ಮಾಯಾಮಾಳವಗೌಳ ಜನ್ಯ. ದೇಶೀಯರಾಗ ಭಾಷಾಂಗ, ಔಡವ ಷಾಡವ ರಾಗ, ಸಾರ್ವಕಾಲಿಕ. ಆದರೂ 12 ರಿಂದ ಮಧ್ಯಾಹ್ನ 3ರ ವರೆಗೆ ಹಾಡತಕ್ಕದ್ದು. ಷಡ್ಜಗ್ರಹ, ಅಂತರ ಗಾಂಧಾರ, ಶುದ್ಧ ಮಧ್ಯಮ, ಶುದ್ಧಧೈವತ, ಕಾಕಲಿ ನಿಷಾದ ಜೀವಸ್ವರಗಳು. ಹಾಸ್ಯಕರುಣ ರಸಪ್ರಧಾನ. ಮನೋರೋಗಹರ.

ಶಹನಾ—ಆರೋಹಣ: ಸ $ರಿ_2$ $ಗ_3$ $ಮ_1$ ಪ ಮ $ಧ_2$ $ನಿ_2$ ಸ |
ಅವರೋಹಣ: ಸ ನೀ ಧ ಪ ಮ ಗ ಮ ರಿ ಗ ರಿ ಸ ||

28ನೇ ಮೇಳ ಹರಿಕಾಂಭೋಜಿ ಜನ್ಯ. ದೇಶೀಯರಾಗ, ಭಾಷಾಂಗ ವಕ್ರಸಂಪೂರ್ಣ, ಸಾರ್ವಕಾಲಿಕ, ಷಡ್ಜಗ್ರಹ, ಚತುಶ್ರುತಿ ಋಷಭ, ಅಂತರ ಗಾಂಧಾರ, ಕೈಶಿಕಿ ನಿಷಾದ ಜೀವಸ್ವರಗಳು. ಕರುಣಾರಸಪ್ರಧಾನ. ಚಿಂ ನಿಶ್ಚಿಂತೆ, ತ್ರಿಸ್ಥಾಯಿ ರಾಗ.

ಶಂಕರಾಭರಣ— ಆರೋಹಣ: ಸ $ರಿ_2$ $ಗ_3$ $ಮ_1$ ಪ $ಧ_2$ $ನಿ_3$ ಸ |
ಅವರೋಹಣ: ಸ ನಿ ಧ ಪ ಮ ಗ ರಿ ಸ ||

29ನೇ ಮೇಳ (ಧೀರ) ಶಂಕರಾಭರಣ ಜನಕರಾಗ. ನಯರಾಗ, ರಾಗಾಂಗ, ಸಂಪೂರ್ಣ. ಸಾಯಂಕಾಲದಲ್ಲಿ ಹಾಡಬೇಕು. ಷಡ್ಜಗ್ರಹ, ಸರ್ವಸ್ವರ ಜೀವಸ್ವರ. ಕರುಣ, ಹಾಸ್ಯ, ಶೃಂಗಾರ, ಭಯಾನಕ ರಸಪ್ರಧಾನ. ಸರ್ವ ವಾತರೋಗಹರ.

ಶ್ರೀರಾಗ— ಆರೋಹಣ: ಸ ರಿ$_2$ ಮ$_1$ ಪ ನಿ$_2$ ಸ |
ಅವರೋಹಣ: ಸ ನಿ ಪ ಧ$_2$ ಪ ಮ ರಿ ಗ$_2$ ರಿ ಸ ||

22ನೇ ಮೇಳ ಖರಹರಪ್ರಿಯ ಜನ್ಯ. ಘನರಾಗ, ಉಪಾಂಗ, ಔಡವ ವಕ್ರಸಂಪೂರ್ಣ. ಬೆಳಿಗ್ಗೆ 6 ರಿಂದ 12 ಮತ್ತು ಸಂಜೆ 6 ರಿಂದ 9ರ ವರೆಗೆ ಹಾಡತಕ್ಕದ್ದು. ಷಡ್ಜಗ್ರಹ, ಚತುಶ್ರುತಿ ಋಷಭ, ಸಾಧಾರಣ ಗಾಂಧಾರ, ಚತುಶ್ರುತಿ ಧೈವತ ಜೀವಸ್ವರಗಳು. ವೀರ, ಕರುಣಾರಸಪ್ರಧಾನ. ಸರ್ವ ರೋಗಹರ. ಮಂಗಳಪ್ರದವಾದ ರಾಗ. ಆದ್ದರಿಂದ ಸಾರ್ವಕಾಲಿಕವೆಂದೂ ಹೇಳಬಹುದು. ಪಧನಿಸ ಎನ್ನುವ ಪ್ರಯೋಗ ಉಂಟು. ಪೂರ್ವಪ್ರಸಿದ್ಧ ವಾದ 18 ಮೇಳಗಳಲ್ಲಿ ಇದೂ ಒಂದು.

ಷಣ್ಮುಖಪ್ರಿಯ—ಆರೋಹಣ: ಸ ರಿ$_2$ ಗ$_2$ ಮ$_2$ ಪ ಧ$_2$ ನಿ$_2$ ಸ |
ಅವರೋಹಣ: ಸ ನಿ ಧ ಪ ಮ ಗ ರಿ ಸ ||

56ನೇ ಮೇಳ ಜನಕ ರಾಗ. ನಯರಾಗ, ರಾಗಾಂಗ, ಸಂಪೂರ್ಣ. ಬೆಳಿಗ್ಗೆ ಮತ್ತು ಸಾಯಂಕಾಲ 6 ರಿಂದ 9ರ ವರೆಗೆ ಹಾಡತಕ್ಕದ್ದು. ನಿಷಾದಗ್ರಹ, ಸರ್ವಸ್ವರ ಜೀವಸ್ವರ. ಸರ್ವರೋಗಹರ.

ಸಾಮ— ಆರೋಹಣ: ಸ ರಿ$_2$ ಮ$_1$ ಪ ಧ$_2$ ಸ |
ಅವರೋಹಣ: ಸ ಧ ಪ ಮ ಗ$_3$ ರಿ ಸ ||

28ನೇ ಮೇಳ ಹರಿಕಾಂಭೋಜಿ ಜನ್ಯ. ಉಪಾಂಗ, ಔಡವ, ಷಾಡವ, ಸಾರ್ವಕಾಲಿಕ, ಷಡ್ಜಗ್ರಹ, ಚತುಶ್ರುತಿ ಋಷಭ, ಶುದ್ಧಮಧ್ಯಮ, ಚತುಶ್ರುತಿ ಧೈವತ ಜೀವಸ್ವರಗಳು. ವೀರ, ಭೀಭತ್ಸ, ಶಾಂತಿಪ್ರದ.

ಹಾಡತಕ್ಕದ್ದು. ಶುದ್ಧಮಧ್ಯಮ, ಕೈಶಿಕಿ ನಿಷಾದ ಜೀವಸ್ವರಗಳು. ಹಾಸ್ಯ, ಭಯಾನಕರಸಪ್ರಧಾನ. ಚಿತ್ತರೋಗಹರ. ಕೆಲವು ಕಡೆ ಪ್ರಯೋಗಗಳಲ್ಲಿ ಶುದ್ಧಧೈವತ ನುಡಿಯುವುದು.

ಕಟಪಯಾದಿ ಸೂತ್ರ (ನಿಯಮ)

ಯಾವುದಾದರೂ ಮೇಳಕರ್ತ ರಾಗದ ಸಂಖ್ಯೆ ಏನು ಎಂಬುದನ್ನು ಈ ಕೆಳಗೆ ಕಂಡ ರೀತಿಯಿಂದ ಕಂಡುಹಿಡಿಯಬಹುದು.

"ಕಾದಿನವ, ಟಾದಿನವ, ಪಾದಿಪಂಚ, ಯಾದ್ಯಷ್ಟ" ಎಂದರೆ 'ಕ' ಎಂಬ ಅಕ್ಷರದಿಂದ ಒಂಭತ್ತೂ 'ಟ' ದಿಂದ ಒಂಭತ್ತೂ 'ಪ' ದಿಂದ ಐದೂ 'ಯ' ದಿಂದ ಎಂಟೂ—ಈ ರೀತಿ ಎಣಿಕೆ ಮಾಡಿದರೆ ಸಿಕ್ಕುವ ಅಕ್ಷರಗಳನ್ನೇ ಮೇಲೆ ಕಂಡ ರಾಗಗಳ ಹೆಸರುಗಳನ್ನಿಡುವುದರಲ್ಲಿ ಉಪಯೋಗಿಸಿರುತ್ತಾರೆ. ಈ ಹೆಸರುಗಳ ಮೊದಲನೇ ಎರಡನೇ ಅಕ್ಷರಗಳ ಸಂಖ್ಯೆಯನ್ನು ಗೊತ್ತುಮಾಡಿ ಕೊಂಡು ಮೊದಲನೆಯ ಸಂಖ್ಯೆಯನ್ನು ಏಕಸ್ಥಾನದಲ್ಲಿಯೂ, ಎರಡನೆಯ ಸಂಖ್ಯೆಯನ್ನು ದಶಕಸ್ಥಾನದಲ್ಲಿಯೂ ಬರೆದರೆ ರಾಗದ ಸಂಖ್ಯೆ ಸಿಕ್ಕುವುದು. 'ನ' ಎಂಬ ಅಕ್ಷರಕ್ಕೆ ಮಾತ್ರ ಸೊನ್ನೆಯನ್ನು ಹಾಕಿಕೊಳ್ಳತಕ್ಕದ್ದು.

ಉದಾಹರಣೆ—"ನಠಭೈರವಿ" ಎಂಬ ಶಬ್ದದಲ್ಲಿ 'ನ' ಎಂಬ ಅಕ್ಷರಕ್ಕೆ ಸೊನ್ನೆಯೂ, 'ಠ' ಎಂಬುದು "ಟಾದಿನವ" "ಟಠಡಢಣ ತಥದಧ" ಎಂಬ 9 ಅಕ್ಷರಗಳಲ್ಲಿ ಎರಡನೆಯದಾದ್ದರಿಂದ ಅದಕ್ಕೆ 2 ಎಂಬ ಸಂಖ್ಯೆಯೂ ಬರುವುದು. ಸೊನ್ನೆಯನ್ನು ಏಕಸ್ಥಾನದಲ್ಲಿಯೂ 2 ಎಂಬ ಸಂಖ್ಯೆಯನ್ನು ದಶಕಸ್ಥಾನದಲ್ಲಿಯೂ ಇಟ್ಟರೆ "20" ಎಂಬ ಸಂಖ್ಯೆಯು ಬರುವುದು. ಹೀಗೆಯೇ "ಧೀರಶಂಕರಾಭರಣ" ಎಂಬ ಶಬ್ದದಲ್ಲಿ ಮೊದಲನೆ ಅಕ್ಷರಕ್ಕೆ ಟಾದಿ ನವದಲ್ಲಿ 9 ಬರುವುದು. ಎರಡನೇ ಅಕ್ಷರವು ಯಾದ್ಯಷ್ಟ ಎಂದರೆ "ಯರಲವ ಶಷಸಹ" ಎಂಬ ಅಕ್ಷರಗಳಲ್ಲಿ ಎರಡನೆಯದಾದುದರಿಂದ 2 ಬರುವುದು. ಆದುದರಿಂದ ಧೀರಶಂಕರಾಭರಣವು 29ನೆಯ ರಾಗವಾಗುವುದು.

1 2 3 4 5 6 7 8 9

ಕಾದಿನವ—ಕ ಖ ಗ ಘ ಙ ಚ ಛ ಜ ಝ

ಟಾದಿನವ—ಟ ಠ ಡ ಢ ಣ ತ ಥ ದ ಧ

ಪಾದಿಪಂಚ—ಪ ಫ ಬ ಭ ಮ

ಯಾದ್ಯಷ್ಟ—ಯ ರ ಲ ವ ಶ ಷ ಸ ಹ

ಮಿಕ್ಕ ಅಕ್ಷರಗಳು ಸೊನ್ನೆ ಎಂದು ತಿಳಿಯಬೇಕು.

ಪ್ರತಿಷೇಧ—

1.	ಚಕ್ರವಾಕ	ಇದು	26	ಆಗುವುದು.	16	ಎಂದು ಪರಿಗಣಿತ
2.	ದಿವ್ಯಮಣಿ	,,	18	,,	48	,,
3.	ವಿಶ್ವಂಭರಿ	,,	44	,,	54	,,
4.	ಚಿತ್ರಾಂಬರಿ	,,	26	,,	66	,,
5.	ಋಷಭಪ್ರಿಯ	,,	60	,,	62	,,

ರಾಗಾಲಾಪನೆ

ರಾಗವನ್ನು ವಿಸ್ತರಿಸುವುದಕ್ಕೆ **ಆಲಾಪನೆ** ಎಂದು ಹೆಸರು. ಪ್ರಾರಂಭದಲ್ಲಿಯೇ ರಾಗದ ಕಳೆ ಸ್ಫುರಿಸುವಂತೆ ಸ್ವಲ್ಪವಾಗಿ ಹಾಡಿ ವಿಸ್ತರಿಸಿ ನಿಲ್ಲಿಸುವುದಕ್ಕೆ **ಆಲಪ್ತಿ** ಎಂದು ಹೆಸರು. ರಾಗ ವಿಸ್ತರಿಸಿ ಹಾಡಿದರೆ **ರಾಗಾಲಾಪನೆ** ಎಂದು ಹೆಸರು. ರಾಗವನ್ನು ಸ್ವಲ್ಪವಾಗಿ ಹಾಡಿದಲ್ಲಿ **ಅಕ್ಷಿಪ್ತಿಕಾ** ಅಥವಾ **ಆಯತ್ತ**ವೆಂದೂ ಹೇಳಲಾಗಿದೆ.

ದಕ್ಷಿಣ ದೇಶದವರ ರಾಗಾಲಾಪನ ಕ್ರಮಕ್ಕೂ ಔತ್ತರೇಯ ಹಿಂದೂಸ್ಥಾನೀ ರಾಗಾಲಾಪನ ಕ್ರಮಕ್ಕೂ ಬಹಳ ವ್ಯತ್ಯಾಸವಿದೆ.

ಪೂರ್ವಕಾಲದಲ್ಲಿ ರಾಗಾಲಾಪನೆಯನ್ನು ಮಂದ್ರದಿಂದ ಪ್ರಾರಂಭಿಸಿ ಕ್ರಮವಾಗಿ ಮೇಲಕ್ಕೇರುತ್ತಾ ಮತ್ತೆ ಕೆಳಗಿಳಿಸುತ್ತಿದ್ದರು. ಈ ಕ್ರಮವು ಈಗ ಔತ್ತರೇಯದಲ್ಲಿದೆ.

ರಾಗವನ್ನು ವಿಳಂಬ, ಮಧ್ಯಮ, ದುರಿತ ಕಾಲಗಳಲ್ಲಿಯೂ ಹಾಡ ತಕ್ಕದ್ದು. ಇದೂ ಈಗ ಚೈತ್ರರೀಯದಲ್ಲಿದೆ.

ಎಲ್ಲ ರಾಗಗಳನ್ನೂ ಮೇಲೆ ವಿವರಿಸಿರುವ ಕ್ರಮದಲ್ಲೇ ಹಾಡಬೇಕು.

ರಾಗಾಲಾಪನೆಯಲ್ಲಿ ತಾನಂ, ತಾನಂ ಎಂದು ಹಾಡುವುದು ರೂಢಿ ಯಲ್ಲಿದೆ. ಅದು ಅನಂತಾನಂತಾನಂತ ಎಂಬುದರ ಅಪಭ್ರಂಶವಾಗಿರಬೇಕು.

ಠಾಯಿ—ಒಂದು ರಾಗದಲ್ಲಿ ಯಾವುದಾದರೊಂದು ಸ್ವರವನ್ನು ಸ್ಥಾಯಿ ಯಾಗಿ ಇಟ್ಟುಕೊಳ್ಳುವುದಕ್ಕೆ 'ಠಾಯಿ' ಎಂದು ಹೆಸರು. ಇದೂ ಒಂದು ವಿಶೇಷವೇ ಸರಿ. ರಾಗದಲ್ಲಿ ಗ್ರಹಸ್ವರಗಳನ್ನು ಹಿಡಿದು ಹಾಡುವುದೇ ಠಾಯ ವೆನಿಸುವುದು. ಗ್ರಹಸ್ವರಗಳನ್ನು ವಾದಿ ಸಂವಾದಿಗಳಾಗಿ ಹಾಡಬೇಕು. ಶಂಕರಾಭರಣದ ಸರಿಗಮ ಈ ನಾಲ್ಕು ಸ್ವರಗಳಿಗೆ ಪಧನಿಸ ಈ ನಾಲ್ಕು ಸ್ವರ ಗಳು ಸಮವಾಗಿವೆ. ಪಧನಿಸ ಹಾಡುವಾಗ ಪಂಚಮಸ್ವರವನ್ನೇ ಷಡ್ಜ ಸ್ವರವನ್ನಾಗಿ ಮಾಡಿ ಹಾಡಿದಲ್ಲಿ ಕಲ್ಯಾಣಿ ರಾಗವಾಗುವುದು. ಆದರೆ ಹಾಡು ತ್ತಿರುವುದು ಶಂಕರಾಭರಣ. ಆ ರಾಗಕ್ಕೆ ಚ್ಯುತಿ ಬರದಂತೆ ಹಾಡಬೇಕು. ಇದನ್ನೇ ಶ್ರುತಿಭೇದವೆಂದು ಹೇಳಿದೆ. ಇದೇ ಗ್ರಹಭೇದವಾಗುವುದು. ಹೀಗೆಯೇ 3-4 ಸ್ವರಗಳನ್ನು ಸಮರ್ಥಿಸಿ ಆಧಾರಶ್ರುತಿಯನ್ನು ಬಿಡದೆ ಹಾಡಿ ಗ್ರಹಭೇದಗಳನ್ನು ತೋರಿಸಬಹುದು.

ಯಾವುದಾದರೊಂದು ರಾಗವನ್ನು ಅನುಸರಿಸಿ ಒಂದು ಸ್ವರವನ್ನು ಸ್ಥಾಯಿಯಾಗಿ ಇಟ್ಟುಕೊಂಡು ಒಂದೊಂದು ಸ್ವರವನ್ನಾಗಿ ಹೆಚ್ಚಿಸಿಕೊಂಡೂ ಅವರೋಹಣದಲ್ಲಿಯೂ ಇದೇ ಕ್ರಮವಾಗಿ ಹಾಡುವುದು.

ಕಟಕ—ತಾನವನ್ನೇ ಪೂರ್ವಾಚಾರ್ಯರುಗಳು 'ಕಟಕ' ಎಂದು ಹೇಳಿ ದ್ದಾರೆ. ಒಂದು ರಾಗಕ್ಕಿರುವ ಎಲ್ಲ ಲಕ್ಷಣಗಳೂ ಕಟಕಕ್ಕಿದೆ. ಇದರಲ್ಲಿಯೂ ಗ್ರಹಸ್ವರ ಭೇದಗಳನ್ನು ಮಾಡುವುದೂ ರೂಢಿಯಲ್ಲಿದೆ.

ಗೀತ—ಗೀತ, ಪ್ರಬಂಧ ಇವುಗಳನ್ನು ಪೂರ್ವಿಕರು ವಿಶೇಷವಾಗಿ ಲಕ್ಷಣಗಳನ್ನು ಬರೆದಿಟ್ಟಿದ್ದಾರೆ. ಸ್ವರಾದಿ ತಾಳಾಂತ್ಯವಾಗಿ ಉಳ್ಳ 6 ಲಕ್ಷಣ ಗಳಿಂದ ಕೂಡಿದ ಗೀತವು ಪ್ರಬಂಧವೆನಿಸುವುದು.

ಗೀತಗಳಲ್ಲಿ **ಶುದ್ಧಸೂಡ, ಛಾಯಾಲಗ** ಎಂದು ಎರಡು ವಿಧ. ಸೂಡ ಎಂದರೆ ಗೀತವೆಂದೇ ಅಭಿಪ್ರಾಯ. ಸೂಡ ಎನ್ನುವುದು ದೇಶೀಯ ಪದ. ಶಾಸ್ತ್ರ ನಿಯಮಗಳಿಂದ ಕೂಡಿದ್ದು ಶುದ್ಧ ಗೀತ. ಸಾಲಗ ಎನ್ನುವುದು ಛಾಯಾಲಗ ಎಂಬುದರ ಅಪಭ್ರಂಶ.

ಪ್ರಬಂಧ—ಸ್ವರಗಳಿಂದಲೂ, ಸಂಬೋಧನೆಯಿಂದಲೂ, ಪದದಿಂದಲೂ, ತನ್ನಾಕಾರದಿಂದಲೂ, ಧ್ವನಿವಿಶೇಷವಾದ ವಾದ್ಯದಿಂದ ಬರುವಂತಿರುವ ಮಾತಿನಿಂದ ಕೂಡಿ ತಾಳದಿಂದ ಕೂಡಿರುವುದೇ ಪ್ರಬಂಧ.

ತಾಳ ಪ್ರಕರಣ

ತಾಳದಲ್ಲಿ ತ ಕಾರವು ಶಂಕರನೆಂದೂ ಳ ಕಾರವು ಶಕ್ತಿಯೆಂದೂ ಶಿವಶಕ್ತಿ ಸಮಾಗಮದಿಂದ ತಾಳ ಉಂಟಾಗಿದೆಯೆಂದು ಹೇಳಿದೆ.

ಎರಡು ಹಸ್ತಗಳ ಸಂಯೋಗ ವಿಯೋಗವೇ ತಾಳವಾಗುವುದು.

ತಾಳ ವಿಭಾಗ—ಮಾರ್ಗ, ದೇಶೀ ಎಂದು ತಾಳವು ಎರಡು ವಿಧ. ಅವು ಒಂದೊಂದೂ ಶುದ್ಧ, ಸಾಲಗ, ಸಂಕೀರ್ಣಗಳೆಂದು 3 ಬಗೆಗಳಾಗಿವೆ.

ದಶಪ್ರಾಣ—ಕಾಲ, ಮಾರ್ಗ, ಕ್ರಿಯ, ಅಂಗ, ಗ್ರಹ, ಜಾತಿ, ಕಳೆ, ಲಯ, ಯತಿ, ಪ್ರಸ್ತಾರ ಎಂದು ತಾಳ ಪ್ರಾಣಗಳು ಹತ್ತು ವಿಧ.

ಕಾಲಪ್ರಾಣ—100 ತಾವರೆ ಎಸಳುಗಳನ್ನು ಒಂದರಮೇಲೆ ಒಂದ ನ್ನಿಟ್ಟು ಸೂಜಿಯಿಂದ ಚುಚ್ಚಿ ರಂಧ್ರ ಮಾಡುವಷ್ಟು ಕಾಲಕ್ಕೆ 'ಕ್ಷಣ' ಎಂದು ಹೆಸರು. 8 ಕ್ಷಣಗಳ ಕಾಲ 1 ಲವ, 8 ಲವಗಳ ಕಾಲ 1 ಕಾಷ್ಟ, 8 ಕಾಷ್ಟ ಗಳು 1 ನಿಮೇಷ (ಕಣ್ಣು ಮಿಟುಕುವಷ್ಟು ಕಾಲ). 8 ನಿಮೇಷಗಳು ಒಂದು ಕಳೆ, 2 ಕಳೆಗಳು ¼ ಭಾಗ (ಚತುರ್ಭಾಗ), 2 ಚತುರ್ಭಾಗಗಳು 1 ಅನುದ್ರುತ, 2 ಅನುದ್ರುತಗಳು 1 ದ್ರುತ, 2 ದ್ರುತಗಳು 1 ಚತುರಶ್ರ

ಲಘು, 2 ಲಘುಗಳು 1 ಗುರು, 3 ಲಘುಕಾಲವು 1 ಪ್ಲುತ, 4 ಲಘುಕಾಲ ಒಂದು ಕಾಕಪಾದವಾಗುವುದು.

ಮಾರ್ಗಪ್ರಾಣ—ದಕ್ಷಿಣ, ವಾರ್ತಿಕ, ಚಿತ್ರ ಎಂದು ಇವುಗಳನ್ನೇ ಈಗ ಕಾಲ, ಮಧ್ಯಮಕಾಲ, ತ್ರಿಕಾಲವೆಂದು ಹೇಳುವರು.

ಕೆಲವು ಸಣ್ಣ ಭೇದಗಳು—

1. ದಕ್ಷಿಣ—ಎರಡು ದೀರ್ಘಾಕ್ಷರ ಕಾಲ.
2. ವಾರ್ತಿಕ—ಒಂದು ದೀರ್ಘಾಕ್ಷರ ಕಾಲ.
3. ಚಿತ್ರ—ಒಂದು ಹ್ರಸ್ವಾಕ್ಷರ ಪ್ರಮಾಣ.

ಮಾರ್ಗಕ್ರಿಯಾಪ್ರಾಣ—ಮಾರ್ಗಕ್ರಿಯಾ, ದೇಶ್ಯಕ್ರಿಯಾ ಎಂದು ಎರಡು ವಿಧ. ಅಲ್ಲದೆ ನಿಶ್ಶಬ್ದಕ್ರಿಯೆ, ಸಶಬ್ದಕ್ರಿಯೆ ಎಂದೂ ಎರಡು ವಿಧ.

ಸಶಬ್ದಕ್ರಿಯೆ—ತಾಳ ಬಡಿಯುವುದು.

ನಿಶ್ಶಬ್ದಕ್ರಿಯೆ—ಕೈಯನ್ನು ಮಗುಚುವುದು.

ಅಂಗಪ್ರಾಣ—ತಾಳ ಸಂಖ್ಯೆಯನ್ನು ತಿಳಿಯಲು ಅನುಕೂಲವಾಗುವ ಸಂಜ್ಞೆ. ಅವು ಅನುದ್ರುತ, ದ್ರುತ, ಲಘು, ಗುರು, ಪ್ಲುತ, ಕಾಕಪಾದ ಎಂದು ಆರು ವಿಧ. ಇವುಗಳಲ್ಲಿ ಮೊದಲಿನ ಮೂರು ಮಾತ್ರ ರೂಢಿಯಲ್ಲಿವೆ.

ಅನುದ್ರುತ—1 ಏಟು

ದ್ರುತ—1 ಏಟು, 1 ಹುಸಿ, ಕೈ ಮಗುಚುವುದು

ಲಘು—1 ಏಟು, ಬೆರಳೆಣಿಸುವುದು.

ಲಘುವು ಜಾತಿರೀತಿಯಾಗಿ 5 ಭಾಗಗಳಾಗಿವೆ.

3	ಸಂಖ್ಯೆಯ	ತ್ರಿಶ್ರಲಘು
4	,,	ಚತುರಶ್ರಲಘು
5	,,	ಖಂಡಲಘು
7	,,	ಮಿಶ್ರಲಘು
9	,,	ಸಂಕೀರ್ಣಲಘು.

ಗ್ರಹಪ್ರಾಣ—ಇದು **ಅತೀತ, ಅನಾಗತ, ಸಮ** ಎಂದು ಮೂರು ವಿಧ. ಸಮ, ವಿಷಮ, ಅತೀತ, ಅನಾಗತ ಎಂದು ನಾಲ್ಕು ವಿಧ ಎಂದೂ ಕೆಲವರ ಮತ.

ಅತೀತ—ಗೀತ ನಡೆದಮೇಲೆ ತಾಳ ಬರುವುದು.

ಅನಾಗತ—ತಾಳವು ನಡೆದಮೇಲೆ ಗೀತವು ಬರುವುದು.

ಸಮ—ತಾಳ ಗೀತಗಳೆರಡೂ ಸಮವಾಗಿ ಬರುವುದು.

ವಿಷಮ—ಮೇಲಿನ ಮೂರು ಕ್ರಮಗಳೂ ಅಲ್ಲದ್ದು.

ಜಾತಿಪ್ರಾಣ—ಚತುರಶ್ರ, ತಿಶ್ರ, ಮಿಶ್ರ, ಖಂಡ, ಸಂಕೀರ್ಣಗಳೆಂದು 5 ಜಾತಿಗಳು. ಅವು ಕ್ರಮವಾಗಿ 4, 3, 7, 5, 9 ಅಕ್ಷರಗಳ ಕಾಲವಾಗಿವೆ.

ಕಳಾಪ್ರಾಣ—ಚತುರಶ್ರಜಾತಿ ಲಘುವಿನಲ್ಲಿ 4 ಅಕ್ಷರಗಳಿವೆ. 1 ಅಕ್ಷರಕ್ಕೆ 4 ಕಳೆಗಳು ಎಂದರೆ 1 ಲಘುವಿಗೆ 16 ಕಳೆಗಳಾಗುವುವು. ಇದೇ ಕಳೆ ಎನ್ನಿಸುವುದು.

ಲಯಪ್ರಾಣ—ದ್ರುತ, ಮಧ್ಯ, ವಿಳಂಬವೆಂದು 3 ವಿಧ. ದ್ರುತವೆಂದರೆ ವೇಗ, ಮಧ್ಯವೆಂದರೆ ಸಾಮಾನ್ಯ, ವಿಳಂಬವೆಂದರೆ ನಿಧಾನ. ಇದು ಅರ್ಧ ಹ್ರಸ್ವಾಕ್ಷರ, 1 ಅಕ್ಷರ, 1 ದೀರ್ಘಾಕ್ಷರವಾಗುವುದು.

ಯತಿಪ್ರಾಣ—ಲಯಪ್ರವರ್ತನ ನಿಯಮವೇ ಯತಿ.

ಪ್ರಸ್ತಾರ—ತಾಳಪ್ರಸ್ತಾರವು ಅನಂತವಾಗಿವೆ. ರಾಗ ಪ್ರಸ್ತಾರವು ಹೇಗೆ ಅನಂತವೋ ಹಾಗೆಯೇ ತಾಳಪ್ರಸ್ತಾರವೂ ಅನಂತ.

ತಾಳಗಳು ಏಳು—ಧ್ರುವ, ಮಠ್ಯ, ರೂಪಕ, ಝಂಪೆ, ತ್ರಿಪುಟ, ಅಟತಾಳ, ಏಕತಾಳ ಎಂಬುವು.

ಪ್ರತಿಯೊಂದು ತಾಳದಲ್ಲಿಯೂ ತ್ರ್ಯಶ್ರ, ಚತುರಶ್ರ, ಖಂಡ, ಮಿಶ್ರ, ಸಂಕೀರ್ಣ ಎಂಬ 3, 4, 5, 7, 9 ಅಕ್ಷರಕಾಲದ ಲಘುಗಳುಳ್ಳ 5 ಜಾತಿಗಳೆಂದು ಈ ಹಿಂದೆ ಹೇಳಿದೆ. ಆದುದರಿಂದ ಒಟ್ಟಿಗೆ 7 × 5 = 35 ತಾಳಗಳಾಗುವುವು.

ಪ್ರತಿ ತಾಳಕ್ಕೂ ಆರು ಅಂಗಗಳಿರುವುವು. ಯಾವುವೆಂದರೆ—

ಹೆಸರು	ಅಂಗಸಂಜ್ಞೆ	ಅಕ್ಷರಕಾಲ	
ಅನುದ್ರುತ	◡	1	
ದ್ರುತ	o	2	
ಲಘು	|	4	(ಚತುರಶ್ರ)
ಗುರು	S	8	ರೂಢಿಯಲ್ಲಿಲ್ಲ
ಪ್ಲುತ	$	12	ರೂಢಿಯಲ್ಲಿಲ್ಲ
ಕಾಕಪಾದ	†	16	ರೂಢಿಯಲ್ಲಿಲ್ಲ

ಪ್ರತಿ ತಾಳಕ್ಕೂ ಒಂದು ಅಥವಾ ಹೆಚ್ಚು ಲಘು ಮತ್ತು ಒಂದು ದ್ರುತ ಇರುವುವು. ಝುಂಪೆತಾಳಕ್ಕೆ ಮಾತ್ರ ಇವುಗಳ ಜತೆಗೆ ಒಂದು ಅನುದ್ರುತವೂ ಬರುವುದು.

ಸೂಚನೆ—"ಅಕ್ಷರಕಾಲ" ಅಥವಾ "ಮಾತ್ರೆ" ಎಂದರೆ ಒಂದು ಹ್ರಸ್ವಾಕ್ಷರವನ್ನು ಉಚ್ಚರಿಸಲು ಹಿಡಿಯುವಷ್ಟು ಕಾಲ.

ಈ ಕೆಳಗೆ ಕಂಡ ಪಥಕದಿಂದ 35 ತಾಳಗಳ ವಿಮರ್ಶೆಯನ್ನು ತಿಳಿಯಬಹುದು.

ತಾಳದ ಹೆಸರು	ಅಂಗ ಸಂಜ್ಞೆ	ಜಾತಿಗಳು ಮತ್ತು ಅಕ್ಷರಕಾಲ				
		ತ್ರ್ಯಶ್ರ	ಚತುರಶ್ರ	ಖಂಡ	ಮಿಶ್ರ	ಸಂಕೀರ್ಣ
ಧ್ರುವ	| o ||	11	14	17	23	29
ಮಠ್ಯ	| o |	8	10	12	16	20
ರೂಪಕ	o |	5	6	7	9	11
ಝುಂಪೆ	| ◡ o	6	7	8	10	12
ತ್ರಿಪುಟ	| o o	7	8	9	11	13
ಅಟ	|| o o	10	12	14	18	22
ಏಕ	|	3	4	5	7	9

ವಾಗ್ಗೇಯಕಾರ

ಪರಿಣಾಮಪೂರ್ವಕವಾದ ಸಾಹಿತ್ಯಜ್ಞಾನ, ಸಂಗೀತಜ್ಞಾನ, ಕವಿತ್ವ ಮಾಡುವ ಜ್ಞಾನ—ಇವು ಮೂರನ್ನೂ ಅಪಾರವಾಗಿ ಪಡೆದವನು ವಾಗ್ಗೇಯಕಾರ ಎನಿಸಿಕೊಳ್ಳುವನು.

ವಾಗ್ಗೇಯಕಾರನು ವ್ಯಾಕರಣಪಂಡಿತನೂ, ಅಮರವೇ ಮೊದಲಾದ ನಿಘಂಟುಗಳನ್ನು ತಿಳಿದವನೂ, ಪರ್ಯಾಯಪದ (ಸಮಾನಾರ್ಥ ಕೊಡುವ ಇತರ ಪದ)ಗಳ ಪರಿಚಯವುಳ್ಳವನೂ, ಕವಿತ್ವ ಮಾಡಲು ಅವಶ್ಯಕವಾದ ಛಂದಶ್ಶಾಸ್ತ್ರ ಪರಿಣತನೂ, ಉಪಮಾದಿಯಾದ ಅಲಂಕಾರಶಾಸ್ತ್ರ ಪರಿಣತನೂ, ವಿಭಾವ, ಅನುಭಾವ, ಸಾತ್ವಿಕ, ಸಂಚಾರಿ ಇತ್ಯಾದಿ ಭಾವಜ್ಞನೂ, ದೇಶ, ಕಾಲ, ಸ್ಥಿತಿಗಳನ್ನು ತಿಳಿದವನೂ ಕುಶಲಮತಿಯೂ ಆದವನು ನಿಜವಾದ ವಾಗ್ಗೇಯಕಾರ.

ಗೀತ, ವಾದ್ಯ, ನೃತ್ಯಗಳಲ್ಲಿ ಚತುರನೂ, ಮನೋಹರವಾದ ಕಂಠ ಧ್ವನಿಯುಳ್ಳವನೂ, ಶಾಸ್ತ್ರೀಯವಾದ ಶಿಕ್ಷಣ ಪಡೆದ ಸಂಗೀತ, ತಾಳಗಳುಳ್ಳ ವನೂ, ಶುದ್ಧವಾದ ಲಯಜ್ಞಾನವುಳ್ಳವನೂ, ಮಾರ್ಗ, ದೇಶೀ ಇತ್ಯಾದಿ ಕ್ರಿಯೆಗಳನ್ನು ತಿಳಿದವನೂ, ತ್ರಿಸ್ಥಾಯಿಗಳಲ್ಲಿ ಸ್ವರಕಂಪನ ಮಾಡಿ, ಸ್ಫುಟ ವಾಗಿ ಉಚ್ಚರಿಸಿ ಹೃದಯಂಗಮವಾಗಿ ಹಾಡುವವನೂ ಆದವನೇ ಉತ್ತಮ ಗಾಯಕನಾದ ವಾಗ್ಗೇಯಕಾರನು.

ಮಾರ್ಗ, ದೇಶೀಯ ರಾಗ ಪರಿಚಿತನೂ, ವಾಕ್ಸಿದ್ಧಿಯುಳ್ಳವನೂ, ವಾಕ್ಚಾತುರ್ಯವುಳ್ಳವನೂ, ರಾಗ ದ್ವೇಷಗಳನ್ನು ಬಿಟ್ಟವನೂ, ಆರ್ದ್ರ ಹೃದ ಯನೂ, ಪರೇಂಗಿತಜ್ಞಾನಿಯೂ, ಒಳ್ಳೆ ನಡತೆಪರನೂ ಆದವನು ಶ್ರೇಷ್ಠ ವಾಗ್ಗೇಯಕಾರ.

ಶ್ರೇಷ್ಠ ವಾಗ್ಗೇಯಕಾರರ ಗುಂಪಿಗೆ ಪುರಂದರದಾಸರೂ, ತ್ಯಾಗರಾಜರೂ, ಮುತ್ತುಸ್ವಾಮಿ ದೀಕ್ಷಿತರೂ ಸೇರಿದವರಾಗಿದ್ದಾರೆ.

ಸಂಗೀತದಲ್ಲಿ ಉತ್ತಮನೂ, ಸಾಹಿತ್ಯದಲ್ಲಿ ಸಾಮಾನ್ಯನೂ ಆದವನು ಕೀರ್ತನೆಗಳನ್ನು ರಚಿಸಿದಲ್ಲಿ ಮಧ್ಯಮ ವಾಗ್ಗೇಯಕಾರ.

ಸಾಹಿತ್ಯವನ್ನು ಚೆನ್ನಾಗಿ ತಿಳಿದು ಮಟ್ಟುಗಳನ್ನು ಚೆನ್ನಾಗಿ ಜೋಡಿಸಿ ಸಂಗೀತಜ್ಞಾನವಿಲ್ಲದವನು ಅಧಮ ವಾಗ್ಗೇಯಕಾರ.

ಕಥಾಕವಿಶ್ರೇಷ್ಠನೂ, ವರ್ಣನಾಕವಿ ಮಧ್ಯಮನೂ, ಮತ್ತೊಬ್ಬರ ಸ್ವರಕ್ಕೆ ಸಾಹಿತ್ಯವನ್ನು ಜೋಡಿಸಿಕೊಡುವವನು ಕುಟ್ಟಕಾರನು (ಅಂದರೆ ಅಧಮಾಧಮ ವಾಗ್ಗೇಯಕಾರ).

ಇವುಗಳೇ ಮುಖ್ಯವಾದ ವಾಗ್ಗೇಯಕಾರ ಲಕ್ಷಣವೆಂದು ಹೇಳಿದೆ.

ಶಾರೀರ ಲಕ್ಷಣ

ರಾಗಾಭಿವ್ಯಕ್ತಿ ಸಾಮರ್ಥ್ಯವನ್ನು ಹೊಂದಿರುವ ಕಂಠಧ್ವನಿಯೇ ಶಾರೀರವೆನಿಸುವುದು. ಶರೀರ ಸಂಬಂಧದಿಂದ ಶಾರೀರವೆನಿಸಿಕೊಂಡಿದೆ. ಅಭ್ಯಾಸವಿಲ್ಲದೆಯೇ ನುಡಿಯುವ ಈ ಶಕ್ತಿಗೆ ರಾಗಾಭಿವ್ಯಕ್ತಿಯೆಂದು ಹೆಸರು.

ಸುಶಾರೀರ ಲಕ್ಷಣ

ತಾರಸ್ಥಾಯಿಯೇ ಮೊದಲಾದ ತ್ರಿಸ್ಥಾಯಿಗಳಲ್ಲಿ ಅನಾಯಾಸವಾಗಿ ಸಂಚರಿಸುವುದಾಗಿಯೂ, ಕಿವಿಗೆ ಇಂಪಾಗಿಯೂ, ರಂಜನೆಯುಳ್ಳದಾಗಿಯೂ, ಗಂಭೀರವಾಗಿಯೂ, ಮೃದುವಾಗಿಯೂ, ಘನವಾಗಿಯೂ, ಮೋಹಕವೂ, ಪ್ರಸರಣಶೀಲವೂ, ವ್ಯಾಪಕವೂ ಆಗಿದ್ದು ಶೋಭಾಯಮಾನವೂ ಆದ ಶಾರೀರವೇ ಸುಶಾರೀರವೆನಿಸುವುದು.

ಕುಶಾರೀರ ಲಕ್ಷಣ

ಶ್ರುತಿಯನ್ನು ಅನುಸರಿಸಲಾಗದ, ಕ್ರೂರವಾದ, ರಂಜನೆಯಿಲ್ಲದ, ರಸವಿಲ್ಲದ, ಸ್ವರಹೀನವಾದ, ಕಾಕಧ್ವನಿಯುಳ್ಳ, ಸ್ಥಾನಭ್ರಷ್ಟವಾದ, ಕೃಶವಾದ ಮತ್ತು ಕಠೋರವಾದ ಶಾರೀರವು ಕುಶಾರೀರವೆನಿಸುವುದು.

ಸುಶಾರೀರ ಪ್ರಾಪ್ತಿ ಮಾರ್ಗ

ವಿದ್ಯಾದಾನ, ತಪಸ್ಸು, ಪರಮಾತ್ಮನಲ್ಲಿ ಹಾಗೂ ಸಂಗೀತದಲ್ಲಿ ಭಕ್ತಿ, ಪ್ರಾಕೃತ ಸತ್ಕರ್ಮ ಇವುಗಳಿಂದ ಶಾರೀರವನ್ನು ಸಂಪಾದಿಸಿಕೊಳ್ಳಬಹುದು.

ಗಾಯಕ ದೋಷಗಳು

25 ವಿಧವಾದ ಗಾಯಕ ದೋಷಗಳಿವೆ ಎಂದು ಸೂಚಿಸಿದೆ:—

1. ಸಂದಷ್ಟ—ಹಲ್ಲು ಕಚ್ಚಿಕೊಂಡು ಹಾಡುವವನು.
2. ಉದ್ಘುಷ್ಟ—ಅಧಿಕ ಧ್ವನಿಯಿಂದ ಹಾಡುವವನು.
3. ಸೂತ್ಕಾರಿ—ಆಯಾಸದಿಂದ ಹಾಡುವವನು.
4. ಭೀತ—ಭಯದಿಂದ ಹಾಡುವವನು.
5. ಶಂಕಿತ—ಸಂದೇಹದಿಂದ ಹಾಡುವವನು.
6. ಕಂಪಿತ—ಶರೀರ, ಶಾರೀರವನ್ನು ನಡುಗಿಸಿ ಹಾಡುವವನು.
7. ಕರಾಳ—ಭಯಪಡಿಸುವವನಂತೆ ಬಾಯಿತೆರೆದು ಹಾಡುವವನು.
8. ವಿಕಲ—ಹೆಚ್ಚು ಕಡಿಮೆಯಾದ ಸ್ವರದಿಂದ ಹಾಡುವವನು.
9. ಕಾಕಿ—ಕಾಗೆಯಂತೆ ಕ್ರೂರಧ್ವನಿಯಿಂದ ಹಾಡುವವನು.
10. ವಿತಾಲ—ತಾಳ ಬಿಟ್ಟು ಹಾಡುವವನು.
11. ಕರಭ—ಒಂಟೆಯಂತೆ ಕತ್ತೆತ್ತಿ ಹಾಡುವವನು.
12. ಉದ್ಘಡ (ಉದ್ಘಟ) ಆಡಿನಂತೆ (ಮೆಲುಕು ಹಾಕುವಂತೆ) ಬಾಯನ್ನು ಕದಲಿಸಿ ಹಾಡುವುದು.
13. ಝೋಂಪಕ—ಕತ್ತನ್ನು ತಿರುಗಿಸುತ್ತಾ ನರಗಳನ್ನು ಉಬ್ಬಿಸಿ ಹಿಡಿದು ಹಾಡುವವನು.
14. ತುಂಬಕ—ಗಲ್ಲಗಳನ್ನೂ, ದವಡೆಗಳನ್ನೂ ಉಬ್ಬಿಸಿ ಹಾಡುವವನು.
15. ವಕ್ರ—ಕತ್ತನ್ನು ಒಂದೇ ಕಡೆ ವಾಲಿಸಿ ಹಾಡುವವನು.

16. ಪ್ರಸಾರಕ—ಕೈ ಮೊದಲಾದ ಅವಯವಗಳಿಂದ ಚೇಷ್ಟೆ ಮಾಡುತ್ತ ಹಾಡುವವನು.

17. ವಿನಿಮೀಲಕ—ಕಣ್ಣುಗಳನ್ನು ಮುಚ್ಚಿ ಹಾಡುವವನು.

18. ವಿರಸ—ರಸಹೀನವಾಗಿ (ರಕ್ತಿಯಿಲ್ಲದೆ) ಹಾಡುವವನು.

19. ಅಪಸ್ವರ—ಸ್ವರ ಶುದ್ಧವಿಲ್ಲದೆ ಶ್ರುತಿ ಬಿಟ್ಟು ಹಾಡುವವನು.

20. ಅವ್ಯಕ್ತ—ಮಾತುಗಳ ಉಚ್ಚಾರ ತಿಳಿಯದಂತೆ ಹಾಡುವವನು.

21. ಸ್ಥಾನಭ್ರಷ್ಟ—ತ್ರಿಸ್ಥಾನಗಳನ್ನು ಬಿಟ್ಟು ಹಾಡುವವನು.

22. ಅವ್ಯವಸ್ಥಿತ—ಗಾನಪದ್ಧತಿ ತಿಳಿಯದೆ ತೋರಿದಂತೆ ಹಾಡುವವನು.

23. ಮಿಶ್ರಕ—ರಾಗಗಳನ್ನು ತಿಳಿಯದೆ ಮಿಶ್ರಮಾಡಿ ಹಾಡುವವನು.

24. ಅನವಧಾನಿ—ಗಮಕಗಳನ್ನು ತಿಳಿಯದೆ ಹಾಡುವವನು.

25. ಅನುನಾಸಿಕನು—ಮೂಗಿನ ಧ್ವನಿ ಸಮೇತ ಹಾಡುವವನು.

ವಾದ್ಯ ಪ್ರಕರಣ

1. ಭೂ ಸಂಬಂಧ—ಚರ್ಮವಾದ್ಯ—ಮೃದಂಗ, ತಬಲ, ಖಂಜಿರ, ತಮಟೆ, ಕವಿಲ್, ಘಟ, ಢಕ್ಕೆ, ಡವಣೆ, ನಗಾರಿ, ಬುಡುಬುಡಿಕೆ, ಚಿಟಕೆ, ಕಾಷ್ಟತರಂಗ್.

2. ಜಲ ಸಂಬಂಧ—ಶಂಖ, ಜಲತರಂಗ್, ನೀರ್ಕೊಳವಿ, ಇತ್ಯಾದಿ.

3. ಅಗ್ನಿಸಂಬಂಧ—ತಾಳ, ಝಾಲರ, ಲೋಹತರಂಗ್, ಗಗ್ಗರ, ಗಂಟೆ.

4. ವಾಯು ಸಂಬಂಧ—ವೀಣೆ, ತಂಬೂರಿ, ಗೋಟುವಾದ್ಯ, ಕೊಳಲು (ವೇಣು), ಓಲಗ, ಮೇಳ, ಪಂಚವಾದ್ಯ, ಸಿತಾರ್, ಸೊರಬತ್, ಸಾರಂಗಿ, ಪಿಟೀಲು, ಮುಖವೀಣೆ.

5. ಆಕಾಶ ಸಂಬಂಧ—(ವಿವಿಧ) ಶಬ್ದಗಳು, ಆಕಾಶತತ್ವ ಎಲ್ಲ ವಾದ್ಯಗಳಿಗೂ ಮುಖ್ಯ. ಆಕಾಶವಿಲ್ಲದಿದ್ದಲ್ಲಿ ಶಬ್ದಗಳೇ ಇಲ್ಲ.

ಕೀರ್ತನ, ಪದ, ದರು, ಚೌಕವರ್ಣ, ತಾನವರ್ಣ, ಜಾವಡಿ, ಸ್ವರಜತಿ, ಜತಿಸ್ವರ, ತಿಲ್ಲಾನ, ಸೂಳಾದಿ, ರಾಗಮಾಲಿಕಾ, ಪಲ್ಲವಿ ಇವುಗಳ ಲಕ್ಷಣಗಳು—

(1) **ಕೀರ್ತನ**—ದೇವತಾಸ್ತುತಿಯಿಂದ ಕೂಡಿದುದೂ, ಪಲ್ಲವಿ, ಅನುಪಲ್ಲವಿ, ಚರಣ ಅಥವಾ ಚರಣಗಳಿಂದ ಕೂಡಿದುದೂ ಆಗಿದೆ. ಅನುಪಲ್ಲವಿ ಪಲ್ಲವಿಯನ್ನು ಅನುಸರಿಸಿದೆ.

(2) **ಪದ**—ಶೃಂಗಾರರಸಯುಕ್ತವಾಗಿಯೂ, ನಾಯಿಕಾನಾಯಕ ಸಂಬಂಧವಾಗಿಯೂ, ಗಂಭೀರವಾಗಿಯೂ, ವಿಳಂಬವಾಗಿ ಹಾಡುವುದಾಗಿಯೂ, ನಾಟ್ಯಕ್ಕೆ ಅನುಕೂಲವಾಗಿಯೂ ಇರುವುದು.

(3) **ದರು**—ಪದಗಳಂತೆಯೆ ಶೃಂಗಾರರಸಯುಕ್ತವಾಗಿಯೂ, ಒಂದು ಚರಣ ಉಳ್ಳದ್ದಾಗಿಯೂ, ಸ್ವಲ್ಪಕಾಲವೇ ಹಾಡತಕ್ಕದ್ದಾಗಿಯೂ ಇರುವುದು. ಕೆಲವು ದರುಗಳಲ್ಲಿ 2–3 ಚರಣಗಳಿರುವುದೂ ಉಂಟು.

(4) **ಚೌಕವರ್ಣ**—ಇದೂ ಸಹ ಪದದಂತೆಯೇ ಇರುವುದಲ್ಲದೆ ಅನುಪಲ್ಲವಿಯು ಎರಡರಷ್ಟಿದ್ದು ಹಾಡಿದಮೇಲೆ ಪಲ್ಲವಿಯನ್ನೇ ಅನುಸರಿಸಿರುವುದು. ಚರಣವು ನಾಲ್ಕು ಆವರ್ತವಿರುವುದು. ವಿಳಂಬವಾಗಿ ಹಾಡಲು ಯೋಗ್ಯವಾಗಿದೆ. 3 ಕಾಲ ಹಾಡಲು ಅನುಕೂಲವಾಗಿದೆ.

(6) **ತಾನವರ್ಣ**—ಇದು ಮಧ್ಯಮಕಾಲದಲ್ಲಿಯೇ ನಡೆಯುವುದು. ಪಲ್ಲವಿ, ಅನುಪಲ್ಲವಿ, ಚರಣಗಳಲ್ಲಿನ ಸಾಹಿತ್ಯಾಕ್ಷರಗಳ ನಡುವೆ ಅಕಾರ, ಇಕಾರ, ಉಕಾರಾದಿಗಳು ಬರುವಂತೆ ಸೇರಿಸಿದೆ. ಇದಕ್ಕೂ 4 ಆವರ್ತಸ್ವರವಿದ್ದು 1, 2, 4 ಹೀಗೆ ಸ್ವರಪ್ರಸ್ತಾರವುಂಟು.

(6) **ಜಾವಡಿ (ಳಿ)**—ಶೃಂಗಾರರಸಯುಕ್ತವಾದದ್ದೂ, ನಾಯಿಕ ನಾಯಕರ ಸಂಬಂಧ ಸಾಹಿತ್ಯವುಳ್ಳದ್ದೂ, ಗಾಂಭೀರ್ಯಕ್ಕೆ ಸ್ವಲ್ಪ ಮೀರಿದ್ದಾಗಿಯೂ, ನಾಟ್ಯಕ್ಕೆ ಅನುಕೂಲವಾಗಿಯೂ ಇರುವುದು.

(7) **ಸ್ವರಜತಿ**—ಮಧ್ಯಮಕಾಲವನ್ನನುಸರಿಸಿಯೂ, ದೇವತಾ ಸಂಬಂಧವಾದ ಅಥವಾ ಶೃಂಗಾರ ಸಂಬಂಧವಾದ ಸಾಹಿತ್ಯವುಳ್ಳದ್ದಾಗಿಯೂ ನಾಟ್ಯಾಭಿನಯಗಳಿಗೆ ಅನುಕೂಲವಾಗಿಯೂ, ಜತಿಸ್ವರಗಳಿಂದ ಕೂಡಿದದಾಗಿಯೂ, ಸ್ವರ ಕಲ್ಪನೆಗೆ ಸಹಾಯಕವಾಗಿಯೂ ಇರುವುದು ಆರೋಹಣಾವರೋಹಣಕ್ರಮವಾಗಿಯೂ ಇದೆ.

(8) **ಜತಿಸ್ವರ**—ಇದು ನಾಟ್ಯಕ್ಕೆ ಅನುಕೂಲವಾಗಿ, ತಾಳಕ್ಕೆ ಅನುಕೂಲವಾದ ಮುಕ್ತಾಯಗಳಿಂದ ಕೂಡಿ ಪಲ್ಲವಿ, ಅನುಪಲ್ಲವಿ, ಚರಣಗಳಿಂದ ಕೂಡಿದ್ದಾಗಿಯೂ ಇದೆ.

(9) **ತಿಲ್ಲಾನ**—ಅನ್ಯದೇಶದ, ಅರ್ಥರಹಿತವಾದ ಶಬ್ದಜೋಡಣೆಗಳಿಂದ ಕೂಡಿದ ಗ್ರಾಮ್ಯಪದಗಳ ಸಮೂಹದ ವರ್ಣಕ್ರಮವನ್ನನುಸರಿಸಿದ ಮಟ್ಟು.

(10) **ಸೂಳಾದಿ**—ಸುಳುವಾದ ಹಾದಿ ಎಂದು ಹೇಳಿದ್ದಾರೆ. ಇದು ಸಪ್ತ ತಾಳಗಳಲ್ಲಿಯೂ ಇದ್ದು ವಿಳಂಬ, ಮಧ್ಯಮ, ಲಯದಿಂದ ಕೂಡಿಯೂ ಗೂಢವಾದ ಭಾವಗಳಿಂದ ಕೂಡಿದ್ದಾಗಿಯೂ ಇದೆ.

(11) **ರಾಗಮಾಲಿಕೆ**—ಶೃಂಗಾರ, ಭಕ್ತಿರಸಪ್ರಧಾನವಾಗಿಯೂ 3–5–7–9 ಹೀಗೆ ನುಡಿ ಅಥವಾ ಚರಣಗಳಿದ್ದು ಬೇರೆಬೇರೆ ರಾಗಗಳಿಂದ ಒಂದೊಂದು ಚರಣವನ್ನು ಹಾಡುವುದಕ್ಕೆ ಅನುಕೂಲವಾದ ಸ್ವರಗಳಿಂದ ಕೂಡಿದ್ದಾಗಿರುವುದು (ಚಿಟ್ಟೆಸ್ವರ).

(12) **ಪಲ್ಲವಿ**—ಪದಗರ್ಭ, ಲಯ, ವಿನ್ಯಾಸ ಇವು ಮೂರೂ ಇರುವುದಕ್ಕೆ ಪಲ್ಲವಿಯೆಂದು ಹೆಸರು.

ಯಾವಯಾವ ಅಕ್ಷರ ಯಾವಯಾವ ಲಯಸ್ಥಾನದಲ್ಲಿತ್ತೋ ವಿನ್ಯಾಸ ಮಾಡುವಾಗ ಅಲ್ಲಲ್ಲಿಗೇ ಬರತಕ್ಕದ್ದು, ಲಯಬದ್ಧವಾಗಿ ಕಾಲ ಮಧ್ಯಮಕಾಲ ಗಳನ್ನನುಸರಿಸಿರುವುದೂ, ಅನುಲೋಮ ವಿಲೋಮವನ್ನು ಅರಿತು ಹಾಡು ವುದೂ ಪಲ್ಲವಿ. ಈ ಮೇಲಿನ ಕ್ರಮದಲ್ಲಿ ಹಾಡಿ ಎಡುಪು (ಎತ್ತುಗಡೆ) ಯನ್ನೆತ್ತಿ, ಕಾಲಾವರ್ತ, ಅರ್ಧಾವರ್ತ, ಮುಕ್ಕಾಲಾವರ್ತ, ಒಂದಾವರ್ತ, ಎರಡು, ನಾಲ್ಕು, ಎಂಟು ಆವರ್ತ ಸ್ವರಗಳ ವಿನ್ಯಾಸಮಾಡಿ ಎತ್ತುಗಡೆ ಯನ್ನು ಎತ್ತುವುದು.

ಸರಿಯಾದ ಗುರುವಿನಿಂದ ಕ್ರಮವರಿತು ಕಲಿತು ಅಭ್ಯಾಸಮಾಡಿ ಹಾಡಬೇಕು.

ಈ ಪುಸ್ತಕದಲ್ಲಿ ಉಪಯೋಗಿಸಿರುವ ಚಿನ್ಹೆಗಳ ವಿವರ—

(.) ಚುಕ್ಕೆ—ಇದರಿಂದ ಹಿಂದೆ ವಿವರಿಸಿರುವಂತೆ ಮಂದ್ರ ಅಥವಾ ತಾರಸ್ಥಾಯಿಯ ಸ್ವರಗಳು ಸೂಚಿಸಲ್ಪಟ್ಟಿರುವುವು.

(—) ಗೀಟು—ಇದು ಸ್ವರಗಳ ಕೆಳಗೆ ಹಾಕಲ್ಪಟ್ಟು, ಆ ಸ್ವರಗಳು ಉಚ್ಚರಿಸಲ್ಪಡಬೇಕಾದ ಕಾಲವನ್ನು ಸೂಚಿಸುವುದು ಹೇಗೆಂದರೆ:—

ಸಾ—ರಿಗ—ಮಪಧಪ—ಧನಿಸನಿಧಧಪಪ ||

